ಉತ್ಕೃಷ್ಟತೆಯತ್ತ ಅಕಾಡೆಮಿ

ಆಕಾಂಕ್ಷೆ ಸಾಧನೆ ಅರ್ಪಣೆ

ಇಂಡಿಯಾ ಫಾರ್ ಐಎಎಸ್

KAS- ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಗಳ

ಪಠ್ಯಕ್ರಮ

Admissions Open for New Batch
Enrol now.....!!!

#95, 2nd and 3rd Floor, 60 ft Main Road, Chandra Layout, Bengaluru-560040
Contact: +91-990 240 4443/990 250 4443
Website: india4ias.com

KAS - ಪೂರ್ವಭಾವಿ ಪರೀಕ್ಷೆ

ಕೆ.ಎ.ಎಸ್ ಗೆಜೆಟೆಡ್ ಪ್ರೋಬೇಷನರ್ಸ್‌ಗಳ ಸ್ಪರ್ಧಾತ್ಮಕ ಪರೀಕ್ಷೆಯ ನೇಮಕಾತಿ ಎರಡು ಹಂತಗಳನ್ನು ಒಳಗೊಂಡಿರುತ್ತದೆ:

1. **ಪೂರ್ವಭಾವಿ ಪರೀಕ್ಷೆಯನ್ನು** (Preliminary Examination) ಮುಖ್ಯ ಪರೀಕ್ಷೆಗೆ (Main Examination) ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ ನಡೆಸಲಾಗುವುದು, ಮತ್ತು
2. **ಮುಖ್ಯ ಪರೀಕ್ಷೆಯನ್ನು** ಮತ್ತು **ವ್ಯಕ್ತಿತ್ವ ಪರೀಕ್ಷೆಯನ್ನು** ವಿವಿಧ ಸೇವೆಗಳು ಮತ್ತು ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ ನಡೆಸಲಾಗುವುದು.

1. **ಪೂರ್ವಭಾವಿ ಪರೀಕ್ಷೆ(Preliminary Examination):** ಈ ಪರೀಕ್ಷೆಯು ಎರಡು ಪತ್ರಿಕೆಗಳನ್ನು ಒಳಗೊಂಡಿರುತ್ತದೆ. ಪ್ರತಿ ಪ್ರಶ್ನೆಗೆ ಎರಡು ಅಂಕಗಳಂತೆ ಪ್ರತಿ ಪತ್ರಿಕೆಯು 100 ಪ್ರಶ್ನೆಗಳನ್ನೊಳಗೊಂಡಿರುತ್ತದೆ. ಪ್ರತಿ ಪತ್ರಿಕೆಯು ಗರಿಷ್ಠ 200 ಅಂಕಗಳು ಮತ್ತು ಎರಡು ಗಂಟೆಗಳ ಕಾಲಾವಧಿಯದ್ದಾಗಿದ್ದು (ಎರಡು ಪತ್ರಿಕೆಗಳಿಗೆ ಒಟ್ಟು 400 ಅಂಕಗಳು) ವಿವರ ಈ ಕೆಳಕಂಡಂತಿರುತ್ತದೆ.

ಕ್ರ.ಸಂ./S.L	ವಿಷಯ/Subject	ಪ್ರಶ್ನೆಗಳ ಸಂಖ್ಯೆ/No. of Question	ಅಂಕಗಳು/Marks
ಪತ್ರಿಕೆ–1			
1	ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರಾಮುಖ್ಯತೆಯ ವಿಷಯಗಳನ್ನು ಒಳಗೊಂಡಂತೆ ಸಾಮಾನ್ಯ ಅಧ್ಯಯನ	40	80
2	ಮಾನವಿಕ ಶಾಸ್ತ್ರ	60	120
	ಒಟ್ಟು	**100**	**200**
ಪತ್ರಿಕೆ–2			
1	ರಾಜ್ಯದ ಪ್ರಾಮುಖ್ಯತೆಗೆ ಸಂಬಂಧಿಸಿದಂತೆ ಸಾಮಾನ್ಯ ಅಧ್ಯಯನ	40	80
2	ಸಾಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಪರಿಸರ ವಿಜ್ಞಾನ	30	60
3	ಸಾಮಾನ್ಯ ಮಾನೋಸಾಮರ್ಥ್ಯ	30	60
	ಒಟ್ಟು	**100**	**200**

ಪತ್ರಿಕೆ	ಪೂರ್ವಭಾವಿ ಪರೀಕ್ಷೆಯ ಪಠ್ಯಕ್ರಮ: (ವಸ್ತುನಿಷ್ಠ ಮಾದರಿ)
ಪತ್ರಿಕೆ–I	1. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವದ ಪ್ರಚಲಿತ ವಿದ್ಯಮಾನಗಳು. 2. ಮಾನವಿಕ ಶಾಸ್ತ್ರ – ಭಾರತದ ಇತಿಹಾಸ – ಕರ್ನಾಟಕವನ್ನು ಪ್ರಾಮುಖ್ಯವಾಗಿರಿಸಿಕೊಂಡು ಭಾರತದ ರಾಷ್ಟ್ರೀಯ ಚಳುವಳಿಗೆ ಹೆಚ್ಚಿನ ಗಮನ ನೀಡಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯವಾಗಿ ಇತಿಹಾಸ ವಿಷಯಗಳ ಬಗ್ಗೆ ಅಭ್ಯರ್ಥಿಯ ವಿಸ್ತಾರವಾದ ಸಾಮಾನ್ಯ ತಿಳುವಳಿಕೆ. 3. ಕರ್ನಾಟಕದ ಬಗ್ಗೆ ಹೆಚ್ಚಿನ ಗಮನ ನೀಡುವುದರೊಂದಿಗೆ ಜಾಗತಿಕ ಭೂಗೋಳ ಶಾಸ್ತ್ರ ಮತ್ತು ಭಾರತದ ಭೂಗೋಳ ಶಾಸ್ತ್ರ. 4. ದೇಶದ ರಾಜಕೀಯ ವ್ಯವಸ್ಥೆ, ಗ್ರಾಮೀಣಾಭಿವೃದ್ಧಿ, ಭಾರತದ ನಿರಂತರ ಅಭಿವೃದ್ಧಿಗೆ ಯೋಜನೆ ಮತ್ತು ಆರ್ಥಿಕ ಸುಧಾರಣೆಗಳು, ಬಡತನ ನಿರ್ಮೂಲನೆ, ಜನಸಂಖ್ಯಾಶಾಸ್ತ್ರ, ಸಾಮಾಜಿಕ ಬದಲಾವಣೆಗಳನ್ನು ಒಳಗೊಂಡಂತೆ ಭಾರತದ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆ.
ಪತ್ರಿಕೆ–II	1. ರಾಜ್ಯದ ಪ್ರಾಮುಖ್ಯತೆಯ ಪ್ರಸ್ತುತ ಘಟನೆಗಳು ಮತ್ತು ರಾಜ್ಯ ಸರ್ಕಾರದ ಪ್ರಮುಖ ಯೋಜನೆಗಳು. 2. ಸಾಮಾನ್ಯ ವಿಜ್ಞಾನಮತ್ತು ತಂತ್ರಜ್ಞಾನ, ಪರಿಸರ ಮತ್ತು ಪರಿಸರ ವಿಜ್ಞಾನ– ವಿಷಯದಲ್ಲಿ ಪ್ರಾವೀಣ್ಯತೆ ಬೇಕಾಗಿಲ್ಲದೆ ಆರೋಗ್ಯ, ಪರಿಸರ ವಿಜ್ಞಾನ, ಜೈವಿಕ ವೈವಿಧ್ಯತೆ ಮತ್ತು ಹವಾಮಾನದಲ್ಲಿ ಬದಲಾವಣೆಗಳು ಇವುಗಳನ್ನೊಳಗೊಂಡಂತೆ 3. ಯಾವುದೇ ವಿಜ್ಞಾನ ವಿಷಯದಲ್ಲಿ ವಿಶೇಷವಾಗಿ ಅಧ್ಯಯನ ಮಾಡದಿರುವ ಒಬ್ಬ ಸುಶಿಕ್ಷಿತ ವ್ಯಕ್ತಿಯಿಂದ ನಿರೀಕ್ಷೆ ಮಾಡುವಂತೆ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ದೈನಂದಿನ ಅನುಭವಗಳು/ ಅವಲೋಕನೆಗಳು/ ಪರಿಣಾಮಗಳು ಮತ್ತು ವಿಜ್ಞಾನ ಮತ್ತುತಂತ್ರಜ್ಞಾನದಲ್ಲಿ ಸಮಕಾಲೀನ ಬೆಳವಣಿಗೆಗಳು. 4. ಸಾಮಾನ್ಯ ಮನೋಸಾಮರ್ಥ್ಯ – ಮನೋಶಕ್ತಿ, ಗ್ರಹಿಸುವಿಕೆ, ತಾರ್ಕಿಕ ಪ್ರತಿಪಾದನೆ ಮತ್ತು ವಿಶ್ಲೇಷಣಾ ಸಾಮರ್ಥ್ಯ, ನಿರ್ಧಾರ ತೆಗೆದುಕೊಳ್ಳುವಿಕೆ, ಸಮಸ್ಯೆ ಬಿಡಿಸುವಿಕೆ, ಮೂಲ ಗಣಿತ ಜ್ಞಾನ (ಸಂಖ್ಯೆಗಳು ಮತ್ತು ಅವುಗಳ ಸಂಬಂಧಗಳು, ಅವುಗಳ ಪರಿಮಾಣ ಇತ್ಯಾದಿ) ಮತ್ತು ದತ್ತಾಂಶದ ವ್ಯಾಖ್ಯಾನ (ನಕ್ಷೆಗಳು, ರೇಖಾಚಿತ್ರಗಳು, ಕೋಷ್ಟಕಗಳು, ದತ್ತಾಂಶ ದಕ್ಷತೆ, ಇತ್ಯಾದಿ – ಹತ್ತನೇ ತರಗತಿ / ಎಸ್.ಎಸ್.ಎಲ್.ಸಿ ಪರೀಕ್ಷೆ ಮಟ್ಟದಲ್ಲಿ).

ಕೆ.ಎ.ಎಸ್ – ಪೂರ್ವಭಾವಿ ಪರೀಕ್ಷೆಗೆ ಕನ್ನಡ ಮಾಧ್ಯಮ ಪುಸ್ತಕಗಳು

ಪತ್ರಿಕೆ–1 (ಸಾಮಾನ್ಯ ಅಧ್ಯಯನ) 100 ಪ್ರಶ್ನೆಗಳು

1. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರಾಮುಖ್ಯತೆಯ ವಿಷಯಗಳನ್ನು ಒಳಗೊಂಡಂತೆ
ಸಾಮಾನ್ಯ ಅಧ್ಯಯನ : ಪ್ರಚಲಿತ ವಿದ್ಯಮಾನಗಳು–40 ಪ್ರಶ್ನೆಗಳು

1. ಪ್ರಜಾವಾಣಿ ದಿನಪತ್ರಿಕೆ
2. India4IAS ಸಂಸ್ಥೆಯ ಅಧ್ಯಯನ ಸಾಮಾಗ್ರಿ
3. ಒಂದು ಮಾಸ ಪತ್ರಿಕೆ

2. ಮಾನವಿಕ ಶಾಸ್ತ್ರ – (60 ಪ್ರಶ್ನೆಗಳು)

ಅ) ಇತಿಹಾಸ :

ಓದಲೇಬೇಕಾದ ಪುಸ್ತಕಗಳು :

1. 12ನೇ ಪಿ.ಯು.ಸಿ ಇತಿಹಾಸ ಪುಸ್ತಕ
2. ಸಮಗ್ರ ಭಾರತದ ಇತಿಹಾಸ – ಕೆ.ಏನ್.ಎ
3. ಕರ್ನಾಟಕ ಇತಿಹಾಸ – ಫಾಲಾಕ್ಷ

ಉಲ್ಲೇಖಿದ ಪುಸ್ತಕಗಳು :

1. ಪ್ರಾಚೀನ, ಮಧ್ಯಯುಗೀನ ಮತ್ತು ಆಧುನಿಕ ಭಾರತದ ಇತಿಹಾಸ – ಸದಾಶಿವ
2. ಪ್ರಾಚೀನ ಭಾರತದ ಇತಿಹಾಸ – ಆರ್.ಎಸ್.ಶರ್ಮಾ
3. ಭಾರತದ ಆಧುನಿಕ ಇತಿಹಾಸ – ಬಿಪಿನ್ ಚಂದ್ರ (ಕನ್ನಡ ಅನುವಾದ)
4. ಕರ್ನಾಟಕ ಚರಿತ್ರೆ – ಸೂರ್ಯನಾಥ್‌ಕಾಮತ್

ಆ) ಭೂಗೋಳ :

1. 11ನೇ ಮತ್ತು 12ನೇ ಪಿ.ಯು.ಸಿ ಭೂಗೋಳ ಪುಸ್ತಕಗಳು
2. ಕರ್ನಾಟಕ ಭೂಗೋಳ– ಡಾ॥ ರಂಗನಾಥ್
3. **Atlas:** The Orient Blackswan School Atlas or Oxford School Atlas

ಉಲ್ಲೇಖಿದ ಪುಸ್ತಕಗಳು :

1. ಪಾಕೃತಿಕ ಭೂಗೋಳ– ಡಾ॥ ರಂಗನಾಥ್
2. ಭಾರತದ ಪಾಕೃತಿಕ ಭೂಗೋಳ– ಡಾ॥ ರಂಗನಾಥ್

ಇ) ಅರ್ಥಶಾಸ್ತ್ರ :

1. 11ನೇ ತರಗತಿ – ಭಾರತದ ಆರ್ಥಿಕ ಅಭಿವೃದ್ಧಿ (NCERT ಅನುವಾದ ಪುಸ್ತಕ)
2. 12ನೇ ತರಗತಿ – ಸಮಗ್ರ ಅರ್ಥಶಾಸ್ತ್ರ ಪರಿಚಯ (NCERT ಅನುವಾದ ಪುಸ್ತಕ)

ಉಲ್ಲೇಖಿದ ಪುಸ್ತಕಗಳು :

1. ಭಾರತದ ಆರ್ಥಿಕ ಸಮೀಕ್ಷೆ
2. ಭಾರತದ ಅರ್ಥಶಾಸ್ತ್ರ – ಹೆಚ್.ಆರ್.ಕೆ

ಈ) **ಭಾರತದ ರಾಜಕೀಯ ವ್ಯವಸ್ಥೆ ಮತ್ತು ಸಂವಿಧಾನ**

1. 11ನೇ ಮತ್ತು 12ನೇ ಪಿ.ಯು.ಸಿ ರಾಜಕೀಯ ವ್ಯವಸ್ಥೆ ಪುಸ್ತಕಗಳು
2. ಭಾರತದ ರಾಜಕೀಯ ವ್ಯವಸ್ಥೆ – ಗಂಗಾಧರ್

ಉಲ್ಲೇಖಿತ ಪುಸ್ತಕಗಳು :

1. ಭಾರತದ ಸಂವಿಧಾನ – ಹೆಚ್.ಎಮ್. ರಾಜಶೇಖರ್

ಪತ್ರಿಕೆ– 2 (ಸಾಮಾನ್ಯ ಅಧ್ಯಯನ) 100 ಪ್ರಶ್ನೆಗಳು

1. ರಾಜ್ಯದ ಪ್ರಾಮುಖ್ಯತೆಗೆ ಸಂಬಂಧಿಸಿದಂತೆ ಸಾಮಾನ್ಯ ಅಧ್ಯಯನ (40 ಪ್ರಶ್ನೆಗಳು)

1. ಕರ್ನಾಟಕ ಆರ್ಥಿಕ ಸಮೀಕ್ಷೆ
2. India4IAS ಸಂಸ್ಥೆಯ ಅಧ್ಯಯನ ಸಾಮಾಗ್ರಿ
3. ಪ್ರಜಾವಾಣಿ ದಿನಪತ್ರಿಕೆ
4. ಮಾಸ ಪತ್ರಿಕೆ

2. ಸಾಮಾನ್ಯ ವಿಜ್ಞಾನ ಮತ್ತುತಂತ್ರಜ್ಞಾನ, ಪರಿಸರ ಮತ್ತು ಪರಿಸರ ವಿಜ್ಞಾನ (30 ಪ್ರಶ್ನೆಗಳು)

1. DSERT – ಸಾಮಾನ್ಯ ವಿಜ್ಞಾನ–8ನೇ ರಿಂದ 10ನೇ ತರಗತಿ (NCERT ಅನುವಾದ ಪುಸ್ತಕ)
2. ಪರಿಸರ ವಿಜ್ಞಾನ– ಡಾ॥ ರಂಗನಾಥ್

ಉಲ್ಲೇಖಿತ ಪುಸ್ತಕಗಳು :

1. ಪರಿಸರ ಅಧ್ಯಯನ – ಪ್ರೊ .ಭೈರಪ್ಪ

3. ಸಾಮಾನ್ಯ ಮನೋಸಾಮರ್ಥ್ಯ (30 ಪ್ರಶ್ನೆಗಳು)

1. ಸಾಮಾನ್ಯ ಮನೋಸಾಮರ್ಥ್ಯ – ಆರ್.ಎಸ್. ಅಗರವಾಲ್

4. ಕಡ್ಡಾಯ ಓದು– ಕರ್ನಾಟಕ ಕೈಪಿಡಿ (ಕೆಲವು ಆಯ್ದ ಅಧ್ಯಾಯಗಳು ಮಾತ್ರ)

INDIA 4 IAS

KAS - ಮುಖ್ಯ ಪರೀಕ್ಷೆ (Main Examination)

ಅರ್ಹತಾ ಪತ್ರಿಕೆಗಳು	ಕನ್ನಡ	150 ಅಂಕಗಳು		2 ಗಂಟೆಗಳು
	ಇಂಗ್ಲೀಷ್	150 ಅಂಕಗಳು		2 ಗಂಟೆಗಳು
ಪತ್ರಿಕೆಗಳು	**ವಿಭಾಗಗಳ ಸಂಖ್ಯೆ**	**ಪ್ರತಿ ವಿಭಾಗದ ಒಟ್ಟು ಅಂಕಗಳು**	**ಒಟ್ಟು ಅಂಕಗಳು**	**ಸಮಯ**
ಪತ್ರಿಕೆ – 1: ಪ್ರಬಂಧಗಳು. ಎರಡು ಪ್ರಬಂಧಗಳು (ಕನ್ನಡ/ಇಂಗ್ಲೀಷ್‌ನಲ್ಲಿ) ಪ್ರಬಂಧ – 1: ರಾಷ್ಟ್ರೀಯ /ಅಂತರಾಷ್ಟ್ರೀಯ ಪ್ರಚಲಿತ ವಿಷಯಗಳು ಪ್ರಬಂಧ – 2: ರಾಜ್ಯ /ಸ್ಥಳೀಯ ಪ್ರಚಲಿತ ವಿಷಯಗಳು	ಎರಡು ಪ್ರಬಂಧಗಳು	ಪ್ರತಿ ಪ್ರಬಂಧ 125 ಅಂಕ	250	3 ಗಂಟೆಗಳು
ಪತ್ರಿಕೆ – 2: ಸಾಮಾನ್ಯ ಅಧ್ಯಯನಗಳು –1 1. ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ (ಭಾರತ ಮತ್ತು ಕರ್ನಾಟಕ) 2. ಸಾಮಾಜಿಕ ಮತ್ತು ರಾಜಕೀಯ ದೃಷ್ಟಿಕೋನ 3. ಭಾರತದ ಅರ್ಥವ್ಯವಸ್ಥೆ – ಯೋಜನೆ, ಗ್ರಾಮೀಣ ಅಭಿವೃದ್ಧಿ, ದತ್ತಾಂಶ ಸಂಗ್ರಹಣೆಗಳ ವಿಶ್ಲೇಷಣೆ, ಅರ್ಥವಿವರಣೆ	ಮೂರು ವಿಭಾಗಗಳು	80/85	250	3 ಗಂಟೆಗಳು
ಪತ್ರಿಕೆ – 3: ಸಾಮಾನ್ಯ ಅಧ್ಯಯನಗಳು –2 1. ಭೌತಿಕ ಲಕ್ಷಣಗಳು ಮತ್ತು ಸ್ವಾಭಾವಿಕ ಸಂಪನ್ಮೂಲಗಳು 2. ಭಾರತ ಸಂವಿಧಾನದ ಸ್ಥೂಲ ಸಮೀಕ್ಷೆ 3. ಸಾರ್ವಜನಿಕ ಆಡಳಿತ ಮತ್ತು ನಿರ್ವಹಣೆ, ಅಂತರಾಷ್ಟ್ರೀಯ ಸಂಬಂಧಗಳು	ಮೂರು ವಿಭಾಗಗಳು	80/85	250	3 ಗಂಟೆಗಳು
ಪತ್ರಿಕೆ – 4: ಸಾಮಾನ್ಯ ಅಧ್ಯಯನಗಳು –3 1. ಭಾರತದ ಅಭಿವೃದ್ಧಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರ ಮತ್ತು ಪ್ರಭಾವ, ಸಾರ್ವಜನಿಕ ವಲಯದಲ್ಲಿ ಮಾಹಿತಿ ತಂತ್ರಜ್ಞಾನ 2. ಸ್ವಾಭಾವಿಕ ವಿಜ್ಞಾನ, ಜೀವ ವಿಜ್ಞಾನ ಕೃಷಿ ವಿಜ್ಞಾನದ ಆರೋಗ್ಯ ಮತ್ತು ನೈರ್ಮಲ್ಯದಲ್ಲಿ ಮುಂದುವರೆದ ಮತ್ತು ಆಧುನಿಕ ಪ್ರವೃತ್ತಿಗಳು 3. ಪರಿಸರ ಮತ್ತು ಜೀವ ಪರಿಸರಶಾಸ್ತ್ರದ ಅಭಿವೃದ್ಧಿಯ ವಿದ್ಯಾಮಾನಗಳು/ಸವಾಲುಗಳು	ಮೂರು ವಿಭಾಗಗಳು	80/85	250	3 ಗಂಟೆಗಳು
ಪತ್ರಿಕೆ – 5: ಸಾಮಾನ್ಯ ಅಧ್ಯಯನಗಳು –4 1. ನೀತಿಶಾಸ್ತ್ರ 2. ಸಮಗ್ರತೆ 3. ಕೌಶಲ್ಯ	ಮೂರು ವಿಭಾಗಗಳು	80/85	250	3 ಗಂಟೆಗಳು
		ಮುಖ್ಯ ಪರೀಕ್ಷೆಯ ಒಟ್ಟು ಅಂಕಗಳು	**1250**	
		ವ್ಯಕ್ತಿತ್ವ ಪರೀಕ್ಷೆಯ ಒಟ್ಟು ಅಂಕಗಳು:	**50**	
		ಒಟ್ಟು ಅಂಕಗಳು	**1300**	

ಅರ್ಹತಾ ಪತ್ರಿಕೆ: ಈ ಪತ್ರಿಕೆಯ ಗುರಿ, ಅಭ್ಯರ್ಥಿಗಳು ಗಂಭೀರವಾದ ತಾರ್ಕಿಕ ಗದ್ಯವನ್ನು ಓದಲು ಮತ್ತು ಅರ್ಥಮಾಡಿಕೊಳ್ಳಲು ಮತ್ತು ತನ್ನ ವಿಚಾರಗಳನ್ನು ಇಂಗ್ಲೀಷ್‌ನಲ್ಲಿ ಸ್ಪಷ್ಟವಾಗಿ ಮತ್ತು ಸರಿಯಾಗಿ ವ್ಯಕ್ತಪಡಿಸುವ ಪರೀಕ್ಷೆಯಾಗಿರುವುದು.

ಅರ್ಹತಾ ಪತ್ರಿಕೆ : ಸಾಮಾನ್ಯ ಕನ್ನಡ

1. ವಿಷಯದ ಸಮಗ್ರ ಅರ್ಥೈಸುವಿಕೆ – 25 ಅಂಕಗಳು
2. ಪದ ಪ್ರಯೋಗ – 25 ಅಂಕಗಳು
3. ವಿಷಯ ಸಂಕ್ಷೇಪಣೆ – 25 ಅಂಕಗಳು
4. ಪದಜ್ಞಾನ – 25 ಅಂಕಗಳು
5. ಲಘು ಪ್ರಬಂಧ – 25 ಅಂಕಗಳು
6. ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರ – 25 ಅಂಕಗಳು

ಅರ್ಹತಾ ಪತ್ರಿಕೆ : ಇಂಗ್ಲೀಷ್

1. ನೀಡಲಾದ ವಾಕ್ಯವೃಂದಗಳ ವ್ಯಾಪಕತೆ (Compreshension of given passages) – 25 ಅಂಕಗಳು
2. ನಿಖರವಾದ ಬರವಣಿಗೆ (Precise writing) – 25 ಅಂಕಗಳು
3. ಪದ ಪ್ರಯೋಗ (Usage) – 25 ಅಂಕಗಳು
4. ಶಬ್ದ ಸಂಗ್ರಹ(Vocabulary) – 25 ಅಂಕಗಳು
5. ಲಘು ಪ್ರಬಂಧ(Short Essay) – 25 ಅಂಕಗಳು
6. ಸಂವಹನ ಕೌಶಲ್ಯಗಳು(Communication Skills)– 25 ಅಂಕಗಳು

ಪತ್ರಿಕೆ –1: ಪ್ರಬಂಧ ಪತ್ರಿಕೆ

ಎರಡು ಪ್ರಬಂಧಗಳು (ಕನ್ನಡ/ಇಂಗ್ಲೀಷ್ ಭಾಷೆಯಲ್ಲಿ)

ಪ್ರಬಂಧ – 1: ಅಂತರಾಷ್ಟ್ರೀಯ/ರಾಷ್ಟ್ರೀಯ ಮಹತ್ವದ ವಿಷಯಗಳು

ಪ್ರಬಂಧ – 2: ರಾಜ್ಯ ಮಹತ್ವ/ಸ್ಥಳೀಯ ಮಹತ್ವ ವಿಷಯಗಳು

ಪತ್ರಿಕೆ –2: ಸಾಮಾನ್ಯ ಅಧ್ಯಯನ – 1

ವಿಭಾಗ – I: ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ (ಭಾರತ ಮತ್ತು ಕರ್ನಾಟಕ) – (6ಘಟಕಗಳು)

ಘಟಕ– I: ಭಾರತದ ಸಾಂಸ್ಕೃತಿಕ ಪರಂಪರೆ (ಆಯ್ದ ಕ್ಷೇತ್ರ ಮತ್ತು ವಿಷಯಗಳು)

1. **ಸಿಂಧೂ ನಾಗರೀಕತೆ** – ಸಿಂಧೂ ನಾಗರೀಕತೆ ಮತ್ತು ವೇದಕಾಲಿನ ನಾಗರೀಕತೆ ನಡುವಿನ ವೈಶಿಷ್ಟ್ಯತೆ – ವರ್ಣ, ಜಾತಿ/ಜಾತಿ ವ್ಯವಸ್ಥೆಯ ವಿಕಾಸ ಧಾರ್ಮಿಕ ಸ್ಥಿತಿ – ಧಾರ್ಮಿಕ ಚಳುವಳಿಗಳ ಉಗಮ.
2. **ಸಾಹಿತ್ಯ:** ಸಂಸ್ಕೃತ ಸಾಹಿತ್ಯ (ಪ್ರಾಚೀನ): ವೇದಕಾಲೀನ ಸಾಹಿತ್ಯ, ಮಹಾಕಾವ್ಯಗಳು ಮತ್ತು ಪುರಾಣಗಳು: ಭಾರತೀಯ ಜನ ಜೀವನ ಹಾಗೂ ಸಂಸ್ಕೃತಿಯ ಮೇಲೆ ಅದರ ಪ್ರಭಾವ:

ರಾಜ್ಯಾಡಳಿತದಲ್ಲಿ ಗದ್ಯಕೃತಿಗಳ ರಚನೆಗಳು, ನೀತಿಶಾಸ್ತ್ರ, (ನೀತಿ), ಜನಪ್ರಿಯ ಮತ್ತು ಪಂಚತಂತ್ರ ಕಥೆಗಳು (ಪ್ರಮುಖ ಕೃತಿಗಳ ರಚನೆಗಳು ಮಾತ್ರ) ಸಾಹಿತ್ಯಕ್ಕೆ ಮೊಗಲರ ಕೊಡುಗೆಗಳು.

3. **ವಿಜ್ಞಾನ ಮತ್ತು ತಂತ್ರಜ್ಞಾನ:** ಗಣಿತಶಾಸ್ತ್ರ, ಖಗೋಳ ಶಾಸ್ತ್ರ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಶರೀರಶಾಸ್ತ್ರ ಮತ್ತು ಔಷಧ ಶಾಸ್ತ್ರ, (ಸರ್ಜರಿಯನ್ನು ಒಳಗೊಂಡು) ನೌಕಾ ನಿರ್ಮಾಣ, ಗಣಿಗಾರಿಕೆ ಮತ್ತು ಲೋಹಶಾಸ್ತ್ರ, ಎಂಜಿನಿಯರಿಂಗ್ ಮತ್ತು ವಾಸ್ತುಶಿಲ್ಪ.
4. **ಕಲೆಗಳು (ಕರ್ನಾಟಕವನ್ನು ಹೊರತುಪಡಿಸಿ):** ಮೌರ್ಯರ ಮತ್ತು ಗುಪ್ತರ ಕಾಲಗಳು, ಖಜುರಾಹೋ ದೇವಾಲಯಗಳು: ಮೌಂಟ್ ಅಬುವಿನ ಜೈನ ದೈವಾಲಯಗಳು ಮತ್ತು ಒಡಿಸಿಯಾದ ದೇವಾಲಯಗಳು: ಪಲ್ಲವ, ಚೋಳ ಮತ್ತು ಪಾಂಡ್ಯರ ಕೊಡುಗೆಗಳು. ಮೊಗಲರ ವಾಸ್ತುಶಿಲ್ಪ: ಕ್ಯಾಥೆಡ್ರಾಲ್ ವಾಸ್ತುಶಿಲ್ಪ: ಬೋಮ್ ಜೀಸಸ್ – ಹಳೆಯ ಗೋವಾ, ಸೇಂಟ್ ಪಾಲ್ಸ್ – ಕೋಲ್ಕತ್ತಾ ಸೇಂಟ್ ಥಾಮಸ್ – ಚೆನ್ನೈ, ಚಿತ್ರಕಲೆ – ಅಜಿಜತಾದ ಚಿತ್ರಾಲಂಕಾರಗಳು: ಮೊಗಲರ ಮತ್ತು ರಜಪೂತರ ಕಾಲದ ಚಿತ್ರಕಲೆ, ನೃತ್ಯ ಮತ್ತು ಸಂಗೀತ: ಶಾಸ್ತ್ರೀಯ ಸಂಗೀತ ಮತ್ತು ನೃತ್ಯದ ಮೊಗಲರ ಕೊಡುಗೆಗಳು, ಭಾರತದ ಜನಪದ ಕಲೆಗಳು.
5. **ಬಾಹ್ಯ ಜಗತ್ತಿಗೆ ಭಾರತದ ಸಂಸ್ಕೃತಿಯ ಕೊಡುಗೆ:** ಕೇಂದ್ರ ಏಷ್ಯಾ, ಚೀನಾ, ಜಪಾನ್, ಆಗ್ನೇಯಾ ಏಷ್ಯಾ ಮತ್ತು ಶ್ರೀಲಂಕಾ.
6. **ಭಾರತದ ಧರ್ಮಗಳು–**

(i) ಹಿಂದೂ ಧರ್ಮ: ಸಾಮಾನ್ಯ ವೈಶಿಷ್ಟ್ಯತೆಗಳು ಮತ್ತು ಕೆಲವು ಸಾಮಾನ್ಯ ನಂಬಿಕೆಗಳು – ಪುರುಷಾರ್ಥಗಳು – ಮತಾಚರಣೆಗಳು ಮತ್ತು ನೀತಿಶಾಸ್ತ್ರಗಳು – ಹಬ್ಬಗಳು ಮತ್ತು ಪವಿತ್ರ ದಿನಗಳು – ತೀರ್ಥಯಾತ್ರೆ ಮತ್ತು ಜಾತ್ರೆಗಳು. ಹಿಂದೂ ಪಂಥಗಳು: ವಿವಿಧ ಪಂಥಗಳಲ್ಲಿ ಸಂಯುಕ್ತವಾಗಿರುವಂಥ ಹಿಂದೂ ಧರ್ಮ, ಶೈವ, ವೈಷ್ಣವ ಮತ್ತು ಶಕ್ತ. ಉಪನಿಷತ್ ಮತ್ತು ಭಗವದ್ಗೀತೆ ತತ್ವ – ಪತಂಜಲಿಯ ಯೋಗತತ್ವ

(ii) ಜೈನಧರ್ಮ: ತತ್ವಗಳು – ರತ್ನಾತ್ರಯ, ನೀತಿ ಸಂಹಿತೆ, ಸಮಾನತೆ (ಸಮಾನ), ಅಹಿಂಸೆ, ಪಂಥಗಳು: ದಿಗಂಬರ ಮತ್ತು ಶ್ವೇತಾಂಬರ

(iii) ಬೌದ್ಧ ಧರ್ಮ: ತತ್ವಗಳು – ನಾಲ್ಕು ಮಹಾ ಸತ್ಯಗಳು, ಅಷ್ಟಾಂಗ ಮಾರ್ಗಗಳು, ನಿರ್ವಾಣ, ನೀತಿ ಸಿದ್ಧಾಂಥಗಳು ಪಂಥಗಳು: ಹೀನಾಯಾನ ಮತ್ತು ಮಹಾಯಾನ

(iv) ಕ್ರಿಶ್ಚಿಯನ್ ಧರ್ಮ: ಯೇಸುಕ್ರಿಸ್ತನ ಬೋಧನೆಗಳು, ಕ್ರಿಶ್ಚಿಯನ್‌ನ ಉಪದೇಶಗಳು, ಸಿದ್ಧಾಂತಗಳು ಮತ್ತು ಧರ್ಮಶಾಸ್ತ್ರ, ಕ್ರಿಶ್ಚಿಯನ್ ಪಂಗಡಗಳು – ರೋಮನ್ ಕ್ಯಾಥೋಲಿಕ್ ಚರ್ಚ್‌ಗಳು, ಪೂರ್ವ ಸಾಂಪ್ರದಾಯಿಕ ಚರ್ಚ್‌ಗಳು ಮತ್ತು ಪ್ರೊಟೆಸ್ಟಂಟ್‌ಗಳ ಚರ್ಚುಗಳು, ಭಾರತದಲ್ಲಿ ಧರ್ಮ ಪ್ರಚಾರಕ ಚಟುವಟಿಕೆಗಳು.

(v) ಇಸ್ಲಾಂ ಧರ್ಮ: ತತ್ವಗಳು ಮತ್ತು ಆಚರಣೆಗಳು – ದೇವರು ಧರ್ಮದ ಮೇಲಿನ ನಂಬಿಕೆ ಐದು 'ಇಸ್ಲಾಂ ಧರ್ಮ ಕಂಬಗಳು" ಪವಿತ್ರ ಸ್ಥಳಗಳು ಮತ್ತು ದಿನಗಳು, ಕುಟುಂಬ ವ್ಯವಸ್ಥೆ ಮತ್ತು ಷರಿಯಾ, ಕರ್ನಾಟಕದಲ್ಲಿ ಸೂಫಿಗಳು, ಪಂಥಗಳು: ಶಿಯಾ ಮತ್ತು ಸುನ್ನಿ.

(vi) ಸಿಖ್ಖ್ ಧರ್ಮ: ತತ್ವಗಳು ಮತ್ತು ಆಚರಣೆಗಳು ಮತ್ತು ಇದರ ವಿಕಾಸ

ಘಟಕ 2: ಪರಿವರ್ತನೆಯತ್ತ ಭಾರತೀಯ ಸಮಾಜ: ಚಿಂತನೆಯ ಪ್ರಮುಖ ಮಾರ್ಗಗಳು: ಆಧುನಿಕ ಭಾರತದ ಇತಿಹಾಸ – 19ನೇ ಶತಮಾನದ ಪ್ರಾರಂಭದಿಂದ: ಸುಧಾರಣೆಗಳು ಮತ್ತು ಸುಧಾರಕರು.

1. ಸಾಮಾಜಿಕ ಮತ್ತು ಧಾರ್ಮಿಕ ದೋಷಗಳ ನಿರ್ಮೂಲನೆ
2. ಎಲ್ಲರಿಗಾಗಿ ವೇದಗಳು – ಜಾತ್ಯಾತೀತ ಸಮಾಜ
3. ಆದರ್ಶ ಸೇವೆ
4. ಶೋಷಿತ ಮಾರ್ಗದ ವಿಮೋಚನೆ
5. "ಎರಡು ರಾಷ್ಟ್ರ"ದ ಸಿದ್ಧಾಂತ ಮತ್ತು ಇಸ್ಲಾಮಿಕ್ ಧರ್ಮದ ಪುನರುಜ್ಜೀವನ
6. ಧರ್ಮ ಮತ್ತು ಶಿಕ್ಷಣದ ಮೂಲಕ ಶೋಷಿತ ವರ್ಗದ ಸಬಲೀಕರಣ
7. ಹಿಂದುತ್ವ ಮತ್ತು ದೇಶಭಕ್ತಿ
8. ದ್ರಾವಿಡ ಚಳುವಳಿ
9. ದಲಿತರ ವಿಮೋಚನೆಗಾಗಿ ಹೋರಾಟ ಮತ್ತು ಅವರ ಸಬಲೀಕರಣ
10. ಸಮಾಜವಾದಿ ಪ್ರಸ್ತಾವನೆ ಮತ್ತು ಸಂಪೂರ್ಣ ಕ್ರಾಂತಿ
11. ಗ್ರಾಮ ಸ್ವರಾಜ್, ಸತ್ಯಾಗ್ರಹ ಮತ್ತು ಭೂದಾನ

ಘಟಕ 3: ಕದಂಬರಿಂದ ಹೊಯ್ಸಳವರೆಗೆ

(i) ಕರ್ನಾಟಕದ ಪ್ರಾಚೀನತೆ: ಕನ್ನಡ ಭಾಷೆ ಮತ್ತು ಸಾಹಿತ್ಯ: ಕನ್ನಡ ನಾಡಿನ ವ್ಯಾಪ್ತಿ: ರಾಜ್ಯ ಮತ್ತು ಜಿಲ್ಲಾ ಗೆಜೆಟಿಯರುಗಳು: ಕರ್ನಾಟಕದ ವಸ್ತು ಸಂಗ್ರಹಾಲಯಗಳು ಮತ್ತು ಪ್ರಾಚೀನ ಪತ್ರಾಗಾರಗಳು: ಐತಿಹಾಸಿಕ ಸ್ಮಾರಕಗಳು ಸಂರಕ್ಷಣೆ ಮತ್ತು ರಕ್ಷಣೆ – ಭಾರತೀಯ ಪುರಾತತ್ವ ಇಲಾಖೆ ಕೆಲಸಗಳು – ಕರ್ನಾಟಕದಲ್ಲಿ ವಿಶ್ವ ಪಾರಂಪರಿಕ ತಾಣಗಳು.

(ii) ಕದಂಬರಿಂದ ಹೊಯ್ಸಳವರೆಗೆ: ವಾಸ್ತುಶಿಲ್ಪ, ಶಿಲ್ಪ, ಸಾಹಿತ್ಯ ಮತ್ತು ಧರ್ಮಕ್ಕೆ ಇವರ ಕೊಡುಗೆಗಳು.

ಘಟಕ 4: ವಿಜಯನಗರ ಸಾಮ್ರಾಜ್ಯ ಮತ್ತು ನಂತರದ ಕಾಲ (1336–1799)

(i) ವಿಜಯನಗರ ಸಾಮ್ರಾಜ್ಯ: ಸಾಮ್ರಾಜ್ಯದ ಉದಯ, ಉದ್ದೇಶಗಳು ಮತ್ತು ಮಹತ್ವಾಕಾಂಕ್ಷೆ – ವಿದ್ಯಾರಣ್ಯ ರಾಜಕೀಯ ಇತಿಹಾಸ: ಹರಿಹರ, ಬುಕ್ಕ, ಇಮ್ಮಡಿ ದೇವರಾಯ, ಕೃಷ್ಣದೇವರಾಯ ಮತ್ತು ಅಳಿಯ ರಾಮರಾಯ – ತಾಳಿಕೋಟೆ ಕದನ ಮತ್ತು ಅದರ ಪರಿಣಾಮಗಳು. ರಾಜಧಾನಿಯ ವೈಭವ – ಆಡಳಿತ – ಸಮಾಜ, ಆರ್ಥಿಕತೆ ಮತ್ತು ಧಾರ್ಮಿಕತೆ: ಕಲೆಗಳು: ಚಿತ್ರಕಲೆ: ಸಂಗೀತ, ನೃತ್ಯ, ಸಾಹಿತ್ಯ, ವಾಸ್ತುಶಿಲ್ಪ ಮತ್ತು ಶಿಲ್ಪ ವಿಜಯನಗರದ ವಿದೇಶಿಗರ ವಿವರಣೆ.

(ii) ಧಾರ್ಮಿಕ ಪಂಥಗಳು: ಶಂಕರಚಾರ್ಯರು, ರಾಮಾನುಜಚಾರ್ಯ, ಮಧ್ವಾಚಾರ್ಯರು – ಶ್ರೀ ಬಸವೇಶ್ವರ, ವೀರಶೈವ ಮತ್ತು ವಚನ ಚಳುವಳಿ – ಹರಿದಾಸ ಚಳುವಳಿ – ಕಲಮುಖ ಶಕ್ತ ಮತ್ತು ಪಾಶುಪಥ ಪಂಥಗಳು.

(iii) ಬಹುಮನಿ ಷಾಹಿಗಳು: ಮಹಮದ್ ಗವಾನ್ – ಬಹಮನಿಯ ಕೊಡುಗೆಗಳು – ಬಿಜಾಪುರದ ಆದಿಲ್ ಷಾಹಿಗಳು, ಸಾಹಿತ್ಯ ಮತ್ತು ವಾಸ್ತುಶಿಲ್ಪಕ್ಕೆ ಕೊಡುಗೆಗಳು – ಕರ್ನಾಟಕದ ಸೂಫಿಗಳು.

(iv) ಚಿಕ್ಕದೇವರಾಜ ಒಡೆಯವರ ಕೊಡುಗೆಗಳು – ಕೆಳದಿ ಮತ್ತು ಚಿತ್ರದುರ್ಗದ ನಾಯಕರು: ಕಿತ್ತೂರಿನ ರಾಣಿಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ, ಯಲಹಂಕದ ನಾಡಪ್ರಭು: ಹೈದರಾಲಿ ಮತ್ತು ಟಿಪ್ಪುಸುಲ್ತಾನ್ (1761–1799)

ಘಟಕ 5: ಆಧುನಿಕ ಮೈಸೂರು (1799–1947)

(i) ಕೃಷ್ಣರಾಜ ಒಡೆಯರ್ 3 – ಅವರ ಕೊಡುಗೆಗಳು

(ii) ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ಸಶಸ್ತ್ರ ದಂಗೆ

(iii) ಕಮೀಷನರುಗಳ ಆಳ್ವಿಕೆ (1831–1881)

(iv) ಹೈದರಾಬಾದ್ – ಕರ್ನಾಟಕದಲ್ಲಿ ನಿಜಾಮರ ಆಳ್ವಿಕೆ

(v) ದಿವಾನರ ಆಳ್ವಿಕೆ ಮೈಸೂರು ಪ್ರಗತಿ

ಘಟಕ 6: ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ ಮತ್ತು ಏಕೀಕರಣ (1885–1956)

(i) ರಾಷ್ಟ್ರೀಯತೆಯ ಉದಯ: ಪೂರ್ವಗಾಂಧಿಯುಗ (1885–1956): ಗಾಂಧಿಯುಗ (1920–1948)

(ii) ಹೈದರಾಬಾದ್ – ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ

(iii) ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ವ್ಯಕ್ತಿಗಳು

(iv) ಕರ್ನಾಟಕ ಏಕೀಕರಣ: ಏಕೀಕರಣ ಚಳುವಳಿಯ ಉದಯಕ್ಕೆ ಕಾರಣಗಳು – ಆಲೂರು ವೆಂಕಟರಾವ್ – ಸಾಕ್ಷರತೆಯ ಪಾತ್ರ, ಸಾಂಸ್ಕೃತಿಕ ಸಂಸ್ಥೆಗಳು ಮತ್ತು ಪತ್ರಿಕಾ ಮಾಧ್ಯಮ – ಕರ್ನಾಟಕ ಏಕೀಕರಣದ ಮೂರು ಹಂತಗಳು (1947–1956)

(v) ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳು: ಧರ್ಮ ಪ್ರಚಾರಕದಿಂದ ಮತ್ತು ಸ್ವಯಂ ಸೇವಾ ಸಂಸ್ಥೆಗಳಿಂದ ಶಿಕ್ಷಣ ಪ್ರಸಾರ – ಮುದ್ರಣ ಮತ್ತು ಪತ್ರಿಕಾ – ಸಾಹಿತ್ಯ ಮತ್ತು ವಿದ್ವತ್ಪೂರ್ಣ ಅಧ್ಯಯನಗಳು – ಕನ್ನಡ ಸಾಹಿತ್ಯದಲ್ಲಿ ನವೀನ ಸಾಹಿತ್ಯ ಪ್ರಕಾರಗಳು – ಹಿಂದುಳಿದ ವರ್ಗದ ಚಳುವಳಿ – ಮಿಲ್ಲರ್ ಸಮಿತಿಯ ವರದಿ, ಕರ್ನಾಟಕದಲ್ಲಿ ಜಾನಪದ ಕಲೆಗಳು.

ವಿಭಾಗ - II : ಸಾಮಾಜಿಕ ಮತ್ತು ರಾಜಕೀಯ ದೃಷ್ಟಿಕೋನ (7 ಘಟಕಗಳು)

1. **ಸ್ವಾತಂತ್ರ್ಯ ನಂತರದ ಕರ್ನಾಟಕ** – ರಾಜಕೀಯ ಬಲವರ್ಧನೆಗಾಗಿ – ಸರ್ಕಾರಗಳ ಸತತ ಪ್ರಯತ್ನಗಳು – ಹಿಂದುಳಿದ ವರ್ಗಗಳು ಮತ್ತು ಸಾಮಾಜಿಕ ನ್ಯಾಯ – ಹಾವನೂರು ಸಮಿತಿ – ವೆಂಕಟಸ್ವಾಮಿ ಸಮಿತಿ – ಚಿನ್ನಪ್ಪರೆಡ್ಡಿ ಸಮಿತಿಯ ವರದಿಗಳು – ಇತ್ತೀಚಿನ ಧೋರಣೆಗಳು – ದಲಿತ ಚಳುವಳಿ – ದೇವರಾಜ ಅರಸ್ ಮತ್ತು ಭೂಸುಧಾರಣೆಗಳು. ಭಾಷಾ ವಿವಾದ: ಗೋಕಾಕ್ ಚಳುವಳಿ – ವಿವಾದಾಂಶಗಳು ಮತ್ತು ದೃಷ್ಟಿಕೋನಗಳು. ಅಂತರರಾಜ್ಯ ವಿವಾದಗಳು – ಗಡಿವಿವಾದಗಳು – ಮಹಾಜನ್ ಸಮಿತಿಯ ವರದಿ ಮತ್ತು ಅದರ ಪ್ರಭಾವ – ಜಲ ವಿವಾದಗಳು – ರೈತರ ಚಳುವಳಿಗಳು , ಪ್ರಾದೇಶಿಕ ಅಸಮತೋಲನ ಮತ್ತು ನಂಜುಂಡಪ್ಪ ಸಮಿತಿಯ ವರದಿ.
2. **ಸಾಮಾಜಿಕ ಬದಲಾವಣೆ ಮತ್ತು ಚಳುವಳಿಗಳು** – ಸಾಮಾಜಿಕ ರಚನೆ ಮತ್ತು ಸಾಮಾಜಿಕ ಬದಲಾವಣೆ, ಸಾಮಾಜಿಕ ಬದಲಾವಣೆ ಸಿದ್ಧಾಂತಗಳು, ಅಸಂಘಟಿತ ಸಮಾಜ ಮತ್ತು ಸಾಮಾಜಿಕ ಚಳುವಳಿಗಳು, ಉದ್ದೇಶಿತ ಸಾಮಾಜಿಕ ಬದಲಾವಣೆ, ಸಾಮಾಜಿಕ ನೀತಿ ಮತ್ತು ಸಾಮಾಜಿಕ ಅಭಿವೃದ್ಧಿ.
3. **ಸಾಮಾಜಿಕ ಬದಲಾವಣೆ ಮತ್ತು ಆಧುನೀಕರಣ:** ಸಂಘರ್ಷ ಪಾತ್ರದ ಸಮಸ್ಯೆಗಳು – ಪೀಳಿಗೆ ನಡುವಿನ ಅಂತರ, ಯುವಜನರ ಅಶಾಂತಿ ಮತ್ತು ಶಿಕ್ಷಣದ ವಾಣಿಜ್ಯೀಕರಣ, ಶೈಕ್ಷಣಿಕ ಶಕ್ತಿಯಾಗಿ

ಭಾರತ ಹೊರಹೊಮ್ಮುವಿಕೆ – ನಿರ್ಬಂಧ ಗುಂಪುಗಳ ಪಾತ್ರ, ಸಂಸ್ಕೃತೀಕರಣ, ಪಾಶ್ಚೀಮಾತ್ಯೀಕರಣ ಮತ್ತು ಆಧುನೀಕರಣ – ಆಧುನೀಕರಣ ವಿರುದ್ಧ ಪಾರಂಪರಿಕತೆ, ಪ್ರಸ್ತುತ ಸಾಮಾಜಿಕ ಪಿಡುಗುಗಳು – ಮೂಲ ಭೂತವಾದಿತನ ಮತ್ತು ಭಯೋತ್ಪಾದನೆ, ನಕ್ಸಲ್‌ವಾದ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಮತ್ತು ಕಪ್ಪುಹಣ.

4. **ಸರ್ಕಾರ ಮತ್ತು ರಾಜಕೀಯ ವ್ಯವಸ್ಥೆ: ವಿಧಾನ ಮಂಡಲ:** ಕಾರ್ಯಾಂಗ ಮತ್ತು ನ್ಯಾಯಾಂಗ, ಪಾರಂಪರಿಕ ಸಮಾಜದಲ್ಲಿ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯ ಪ್ರಕಾರ್ಯ, ರಾಜಕೀಯ ಪಕ್ಷ ಮತ್ತು ಅದರ ಸಾಮಾಜಿಕ ಸಂಯೋಜನೆ.
5. **ಅಧಿಕಾರದ ವಿಕೇಂದ್ರೀಕರಣ:** ಅಧಿಕಾರದ ವಿಕೇಂದ್ರೀಕರಣ ಮತ್ತು ರಾಜಕೀಯ ಭಾಗವಹಿಸುವಿಕೆ, ಕೇಂದ್ರ ಸರ್ಕಾರ, ಸಂಸತ್ತು, ಸಚಿವ ಸಂಪುಟ, ಸರ್ವೋಚ್ಚ ನ್ಯಾಯಾಲಯ, ನ್ಯಾಯಿಕ ವಿಮರ್ಶೆ, ಕೇಂದ್ರ – ರಾಜ್ಯದ ಸಂಬಂಧಗಳು, ರಾಜ್ಯ ಸರ್ಕಾರ, ರಾಜ್ಯಪಾಲರ ಪಾತ್ರ, ಪಂಚಾಯತ್ ರಾಜ್, ಭಾರತದ ರಾಜಕಾರಣದಲ್ಲಿ ವರ್ಗ ಮತ್ತು ಜಾತಿ, ಪ್ರಾಂತೀಯ ರಾಜಕೀಯ, ಭಾಷೀಕರಣ ಮತ್ತು ಕೋಮುವಾದ. ಜಾತ್ಯಾತೀಕರಣ ಕಾರ್ಯನೀತಿಯ ಸಮಸ್ಯೆಗಳು ಮತ್ತು ರಾಷ್ಟ್ರೀಯ ಏಕೀಕರಣ, ರಾಜಕೀಯ ಭಾಗವಹಿಸುವಿಕೆ ಮತ್ತು ಮತದಾನ, ಮತಬ್ಯಾಂಕ್ ರಾಜಕೀಯ.
6. **ಸಾಮಾಜಿಕ ಆರ್ಥಿಕ ವ್ಯವಸ್ಥೆ:** ಜಾಜಮಾನಿ ಪದ್ಧತಿ ಮತ್ತು ಸಾಂಪ್ರದಾಯಿಕ ಸಮಾಜದ ಮೇಲೆ ಅದರ ಪ್ರಭಾವ. ಮಾರುಕಟ್ಟೆ ಅರ್ಥವ್ಯವಸ್ಥೆ ಮತ್ತು ಅದರ ಸಾಮಾಜಿಕ ಪರಿಣಾಮಗಳು, ವೃತ್ತೀಯ ವೈವಿಧ್ಯೀಕರಣ ಮತ್ತು ಸಾಮಾಜಿಕ ರಚನೆ, ವೃತ್ತಿ ಮತ್ತು ವೃತ್ತಿಪರ, ಕಾರ್ಮಿಕ ಸಂಘಗಳ ಪಾತ್ರ, ಸಾಮಾಜಿಕ ನಿರ್ಣಾಯಕಗಳು ಮತ್ತು ಆರ್ಥಿಕ ಅಭಿವೃದ್ಧಿಯ ಪರಿಣಾಮ, ಆರ್ಥಿಕ ಅಸಮಾನತೆಗಳು, ಶೋಷಣೆ ಮತ್ತು ಭ್ರಷ್ಟಚಾರ, ಜಾಗತೀಕರಣ ಮತ್ತು ಅದರ ಸಮಾಜಿಕ ಪರಿಣಾಮ.
7. **ಗ್ರಾಮೀಣ – ಸಾಮಾಜಿಕ ವ್ಯವಸ್ಥೆ ಮತ್ತು ಗ್ರಾಮೀಣಾಭಿವೃದ್ಧಿ** – ಗ್ರಾಮ ಸಮುದಾಯದ ಸಾಮಾಜಿಕ ಸಾಂಸ್ಕೃತಿಕ ಆಯಾಮಗಳು, ಸಾಂಪ್ರದಾಯಿಕ ಅಧಿಕಾರ ರಚನೆ, ಪ್ರಜಾಸತ್ತಾತ್ಮೀಕರಣ ಮತ್ತು ನಾಯಕತ್ವ, ಬಡತನ, ಋಣಾತ್ವ, ಜೀತ ಕಾರ್ಮಿಕ, ಭೂಸುಧಾರಣೆಗಳ ಸಾಮಾಜಿಕ ಪರಿಣಾಮಗಳು, ಗ್ರಾಮೀಣಾಭಿವೃದ್ಧಿ ಯೋಜನೆಗಳು, ಹಸಿರುಕ್ರಾಂತಿ, ಗ್ರಾಮೀಣಾಭಿವೃದ್ಧಿಯ ಹೊಸ ಕಾರ್ಯತಂತ್ರಗಳು, ಬದಲಾಗುತ್ತಿರುವ ಗ್ರಾಮೀಣ ಚಿತ್ರಣ.

ವಿಭಾಗ – III: ಭಾರತೀಯ ಅರ್ಥವ್ಯವಸ್ಥೆ – ಯೋಜನೆ – ಗ್ರಾಮೀಣಾಭಿವೃದ್ಧಿ (8 ಘಟಕಗಳು)

1. **ಭಾರತದ ಅರ್ಥವ್ಯವಸ್ಥೆ:** ಸ್ವಾತಂತ್ರ್ಯ ನಂತರದ ಬೆಳವಣಿಗೆ – ಕೃಷಿಯ ಅನುಭವ, ಕೈಗಾರಿಕೆ ಮತ್ತು ತೃತೀಯ ವಲಯಗಳು, ಬೆಳವಣಿಗೆ ಮತ್ತು ಹಂಚಿಕೆ ನ್ಯಾಯ, ಬಡತನ ಮತ್ತು ಅಸಮಾನತೆ, ಯೋಜನಾ ಅವಧಿಯಲ್ಲಿ ಕರ್ನಾಟಕ ಅರ್ಥವ್ಯವಸ್ಥೆಯ ಬೆಳವಣಿಗೆ ಯುಗ, ರಾಜ್ಯ ಅರ್ಥ ವ್ಯವಸ್ಥೆಯಲ್ಲಿ ವೃದ್ಧಿ ಮತ್ತು ಕ್ಷೇತ್ರೀಯ ಬದಲಾವಣೆಗಳು ಮತ್ತು ಪರಸ್ಪರ ಸಂಪರ್ಕ.
2. **ಭಾರತ ಮತ್ತು ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳು:** ಬೆಳವಣಿಗೆ ಮತ್ತು ವ್ಯಾಪಾರ, ರಫ್ತುಗಳು ಮತ್ತು ಆಮದುಗಳ ಪರಿಣಾಮ, ಸಂಯೋಜನೆ ಮತ್ತು ಮಾರ್ಗ, ಆರ್ಥಿಕ ಅಭಿವೃದ್ಧಿಯಲ್ಲಿ ದೇಶೀಯ ಮತ್ತು ವಿದೇಶಿ ಬಂಡವಾಳ, ಭಾರತದ ವಿದೇಶಿ ವ್ಯಾಪಾರ ನೀತಿಯಲ್ಲಿ ಬದಲಾವಣೆಗಳು, ಸಂದಾಯಗಳ ಬಾಕಿ ಮತ್ತು ವಿದೇಶಿ ವಿನಿಮಯ, ಕರ್ನಾಟಕದ ರಫ್ತುಗಳು – ಪರಿಣಾಮ, ಸಂಯೋಜನೆ ಮತ್ತು ಮಾರ್ಗ.

3. **ಅಭಿವೃದ್ಧಿಯ ಮಾರ್ಗಗಳು:** ಪ್ರಾಂತ್ಯಗಳ ಮಧ್ಯೆ ಹಾಗೂ ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಿನ ತಾರತಮ್ಯ, ತಾರತಮ್ಯಗಳನ್ನು ತಗ್ಗಿಸಲು ಸಾರ್ವಜನಿಕ ಕಾರ್ಯನೀತಿಗಳು, ವಿಶೇಷ ಆರ್ಥಿಕ ವಲಯಗಳ ನಿರೀಕ್ಷೆಗಳು ಮತ್ತು ಸಮಸ್ಯೆಗಳು, ಕರ್ನಾಟಕದ ಪ್ರಗತಿಯಲ್ಲಿ ತಾರತಮ್ಯ ಮತ್ತು ಸಾರ್ವಜನಿಕ ಕಾರ್ಯನೀತಿಗಳು, ಅಭಿವೃದ್ಧಿ ತಾರತಮ್ಯದ ಪರಿಹಾರ, ಪ್ರಾದೇಶಿಕ ಅಭಿವೃದ್ಧಿ ಮಂಡಳಿಗಳು.

4. **ಯೋಜನೆ – ಯೋಜನೆಯ ಗುರಿಗಳು:** ಉದ್ದೇಶಗಳು ಮತ್ತು ಪ್ರಸ್ತಾಪಗಳು, ಪಂಚವಾರ್ಷಿಕ ಯೋಜನೆಗಳ ಸಾಧನೆಗಳು ಮತ್ತು ವಿಫಲತೆಗಳು (ಖ ರಿಂದ ಗಿಖಖ ರವರೆಗಿನ ಪಂಚವಾರ್ಷಿಕ ಯೋಜನೆಗಳು) ಹೊಸ ಆರ್ಥಿಕ ನೀತಿಗಳ ಆಡಳಿತ ಕ್ರಮದಲ್ಲಿ ಅಭಿವೃದ್ಧಿ ಯೋಜನೆಗಳು (ಗಿಖಖಖ ನೇ ಪಂಚವಾರ್ಷಿಕ ಯೋಜನೆಯ ನಂತರ) ಕರ್ನಾಟಕದಲ್ಲಿ ಯೋಜನೆಗಳು.

5. **ವಿಕೇಂದ್ರೀಕರಣ:** ಉನ್ನತ ಯೋಜನೆ ಮತ್ತು ಮೂಲಭೂತ ಯೋಜನೆಯ ಸಾಧಕ ಮತ್ತು ಭಾದಕಗಳು ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಯಾಂತ್ರಿಕ ಯೋಜನೆ ಮತ್ತು ಅನುಭವ, ಯೋಜನೆ ರೂಪಿಸುವುದು ಮತ್ತು ಸಾಮರ್ಥ್ಯ ವೃದ್ಧಿಗೊಳಿಸುವುದು. ಯೋಜನೆ ಮತ್ತು ಹಣಕಾಸು, ಕರ್ನಾಟಕದಲ್ಲಿ ವಿಕೇಂದ್ರಿಕೃತ ಯೋಜನೆ, ಸಂಪನ್ಮೂಲ ಕ್ರೋಢೀಕರಣ ಮತ್ತು ವಹಿಸುವಿಕೆ, ಜಿಲ್ಲಾ ಯೋಜನಾ ಸಮಿತಿ, ರಾಜ್ಯ ಹಣಕಾಸು ಮತ್ತು ಸ್ಥಳೀಯ ಹಣಕಾಸುಗಳು, ರಾಜ್ಯ ಹಣಕಾಸು ಆಯೋಗ.

6. **ಗ್ರಾಮೀಣಾಭಿವೃದ್ಧಿ:** ರಾಷ್ಟ್ರೀಯ ಅರ್ಥವ್ಯವಸ್ಥೆಯಲ್ಲಿ ಕೃಷಿಯ ಪ್ರಾಮುಖ್ಯತೆ, ಗಾಂಧಿಮಾರ್ಗದ ಗ್ರಾಮೀಣ ಅಭಿವೃದ್ಧಿ ಭೂಸುಧಾರಣೆಗಳು, ಬೇಸಾಯ ಉತ್ಪಾದಕತೆಯ ಗಾತ್ರ, ನೀರಾವರಿ ಮತ್ತು ಒಣಬೇಸಾಯದ ಸಮಸ್ಯೆಗಳು, ಆಹಾರ ಭದ್ರತೆ, ಗ್ರಾಮೀಣ ಸಾಲ, ಕೃಷಿ ಮಾರುಕಟ್ಟೆ, ಕೃಷಿ ಕಾರ್ಮಿಕ, ಗ್ರಾಮೀಣ ಕೈಗಾರಿಕೆಗಳು ಮತ್ತು ಉದ್ಯೋಗ, ಕರ್ನಾಟಕ ಕೃಷಿಯ ಸಮಸ್ಯೆಗಳು, ಗ್ರಾಮೀಣ ಆರ್ಥಿಕತೆಯ ಮೂಲಸೌಕರ್ಯಗಳು (ಇಂಧನ, ನೀರಾವರಿ, ಸಾರಿಗೆ, ಸಂಪರ್ಕ, ಮಾರುಕಟ್ಟೆಗಳು) ಗ್ರಾಮೀಣ ಸಾಮಾಜಿಕ ಮೂಲಸೌಕರ್ಯಗಳು – ವಸತಿ, ಕುಡಿಯುವ ನೀರು, ನೈರ್ಮಲ್ಯ ಮತ್ತು ಚರಂಡಿ ವ್ಯವಸ್ಥೆ, ಗ್ರಾಮೀಣ ಆರೋಗ್ಯ ವ್ಯವಸ್ಥೆಗಳು ಮತ್ತು ಅವುಗಳ ಹಂಚಿಕೆ. ಕರ್ನಾಟಕದಲ್ಲಿ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಮೂಲಸೌಕರ್ಯಗಳು, ಕರ್ನಾಟಕದಲ್ಲಿ ಗ್ರಾಮೀಣ ಮಾರುಕಟ್ಟೆಗಳು, ಕರ್ನಾಟಕದಲ್ಲಿ ಗ್ರಾಮೀಣ ವಸತಿ ಮತ್ತು ಆರೋಗ್ಯ ಪಾಲನಾ ವ್ಯವಸ್ಥೆಗಳು.

7. **ಗ್ರಾಮೀಣಾಭಿವೃದ್ಧಿಯ ಪ್ರಾರಂಭದ ಹಂತಗಳು:** ಬಡತನ ನಿರ್ಮೂಲನೆ ಹಾಗೂ ಉದ್ಯೋಗ ಸೃಜನ ಕಾರ್ಯಕ್ರಮಗಳು, ಪಂಚವಾರ್ಷಿಕ ಯೋಜನೆ ಮತ್ತು ಒಟ್ಟಾರೆ ಅಭಿವೃದ್ಧಿ, ಗ್ರಾಮೀಣ ಹಣಕಾಸಿನ ಸಂಸ್ಥೆಗಳು, ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ ಸ್ವತ್ತು ಸಂಪನ್ಮೂಲಗಳ ಅಭಿವೃದ್ಧಿ ಮತ್ತು ಸಂರಕ್ಷಣೆ – ಗ್ರಾಮ ಹುಲ್ಲುಗಾವಲುಗಳು ಮತ್ತು ಮರಮುಟ್ಟುಗಳು, ಜಲಭಾಗಗಳು, ಗ್ರಾಮೀಣ ಪ್ರದೇಶಗಳಲ್ಲಿ ನಗರ ಸೌಕರ್ಯಗಳನ್ನು ಒದಗಿಸುವಿಕೆ (ಪಿಯುಆರ್‌ಎ). ಕರ್ನಾಟಕದಲ್ಲಿ ಗ್ರಾಮೀಣಾಭಿವೃದ್ಧಿ ಯೋಜನೆಗಳು, ಕರ್ನಾಟಕದಲ್ಲಿ ಸ್ವ–ಸಹಾಯ ಗುಂಪುಗಳು, ಮತ್ತು ಕಿರು ಬಂಡವಾಳ ಸಂಸ್ಥೆಗಳು, ಕರ್ನಾಟಕದ ಗ್ರಾಮೀಣ ಕೆರೆ ಪುನರುಜ್ಜೀವನ, ಕುಡಿಯುವ ನೀರು, ನೈರ್ಮಲ್ಯ ಮತ್ತು ಆರೋಗ್ಯ ಸಂರಕ್ಷಣೆಗೆ ಬಾಹ್ಯ ನೆರವು.

8. **ದತ್ತಾಂಶ ಸಂಗ್ರಹಣೆ ವಿಶ್ಲೇಷಣೆ – ಅರ್ಥ ವಿವರಣೆ:** ಅಂಕಿ ಅಂಶಗಳ ದತ್ತಾಂಶ ಸಂಗ್ರಹಣೆ, ಅರ್ಥ ವಿವರಣೆ ಮತ್ತು ಗುಣಾವಗುಣ ವಿವೇಚನೆ, ಗ್ರಾಫ್‌ಗಳು ಮತ್ತು ಚಾರ್ಟ್‌ಗಳ ಅಧ್ಯಯನ, ಬಾರ್ ಗ್ರಾಫ್‌ಗಳು, ಲೈನ್ ಗ್ರಾಫ್‌ಗಳು ಮತ್ತು ಪೈಚಾರ್ಟ್‌ಗಳು, ಕೋಷ್ಟಕ ಮತ್ತು ರೇಖಾಕೃತಿ ದತ್ತಾಂಶದ

ಮೇಲೆ ಆಧಾರಿತವಾದ ಸಮಸ್ಯೆಗಳು – ಅಂಕಿಅಂಶಗಳ ದತ್ತಾಂಶ ಪರ್ಯಾಪ್ತತೆ – ಸಂಭಾವ್ಯತೆಯನ್ನಾಧರಿಸಿದ ಸಮಸ್ಯೆಗಳು ಪರಿವರ್ತನೆಗಳು ಮತ್ತು ಸಂಯೋಜನೆಗಳು – ಪರಿಮಾಣಾತ್ಮಕ ಸಾಮರ್ಥ್ಯ – ಸಂಖ್ಯಾ ಅನುಕ್ರಮಗಳು, ಶ್ರೇಣಿಗಳು, ಸರಾಸರಿಗಳು, ಸಂಖ್ಯಾ ಪದ್ಧತಿಗಳು ಅನುಪಾತ ಮತ್ತು ಪ್ರಮಾಣ, ಲಾಭ ಮತ್ತು ನಷ್ಟ, ಶೇಕಡಾವಾರು, ಸಮಯ ಮತ್ತು ಕೆಲಸ, ವೇಗ – ಸಮಯ – ಅಚಿತರ, ಸರಳಬಡ್ಡಿ, ವಿಶ್ಲೇಷಣಾತ್ಮಕ ಮತ್ತು ನಿರ್ಣಯಾತ್ಮಕ ಕಾರಣ, ಓದುವ ಗ್ರಹಿಕೆ.

ಪತ್ರಿಕೆ –3: ಸಾಮಾನ್ಯ ಅಧ್ಯಯನ – 2

ವಿಭಾಗ – I: ಭೌತಿಕ ಲಕ್ಷಣಗಳು ಮತ್ತು ಸ್ವಾಭಾವಿಕ ಸಂಪನ್ಮೂಲಗಳು

ವಿಶ್ವ ಭೂಗೋಳ

1. **ಭೂ ಮಂಡಲ** – ಸೌರಮಂಡಲದಲ್ಲಿ ಭೂಮಿಯ ಸ್ಥಾನ, ಬಂಡೆಗಳು, ಭೂಕಂಪಗಳು, ಜ್ವಾಲಾಮುಖಿಗಳು, ಶಿಲಾ ಫಲಕಗಳ ಸಂಚಲನ, ಸವೆತ, ಕಾರಕಗಳು, **ವಾಯುಮಂಡಲ** – ರಚನೆ ಮತ್ತು ಸಂಯೋಜನೆ – ಹವಾಮಾನ ಮತ್ತು ವಾಯುಗುಣದ ಅಂಶಗಳು – ವ್ಯಾಪಕವಾದ ಹವಾಮಾನದ ವಿಧಗಳು, **ಜಲಮಂಡಲ** – ವಿಶ್ವ ಸಾಗರಗಳ ಲವಣಾಂಶ – ಸಾಗರ ಪ್ರವಾಹಗಳು ಮತ್ತು ಅಲೆಗಳು – ಸಾಗರ ನಿಕ್ಷೇಪಗಳು.
2. **ಭೂ ಖಂಡಗಳ ಪ್ರಕೃತಿ ಗೋಚರ ವಿಷಯಗಳು ಮತ್ತು ಜನಸಾಂದ್ರತೆ ವಿವರಣೆ:** ಪರ್ವತಗಳು, ನದಿಗಳು, ಅರಣ್ಯಗಳು, ಹುಲ್ಲುಗಾವಲು ಭೂಮಿಗಳು, ಮರುಭೂಮಿಗಳು, ಮಾನವ ಜನಾಂಗಗಳು, ಜನಸಂಖ್ಯೆಯ ಬದಲಾವಣೆ, ವಿತರಣೆ ಮತ್ತು ಜನಸಂಖ್ಯಾ ಪರಿವರ್ತನೆ, ಸಾಂದ್ರತೆ, ಲಿಂಗಾನುಪಾತ, ಜೀವನದ ಗುಣಮಟ್ಟ, ಜೀವಮಾನ ನಿರೀಕ್ಷೆ, ಸಾಕ್ಷರತೆ, ಜೀವನದ ಗುಣಮಟ್ಟ ಮತ್ತು ವಲಸೆ.

ಭಾರತದ ಭೂಗೋಳ

3. **ಭಾರತದ ಭೌಗೋಳಿಕತೆ:** ಹವಾಗುಣ, ನದಿಗಳು, ಮಣ್ಣು, ನೈಸರ್ಗಿಕ ಸಸ್ಯಗಳು.

   ಖನಿಜ ಸಂಪನ್ಮೂಲಗಳು: ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್ – ತಾಮ್ರ ಮತ್ತು ಬಾಕ್ಸೈಟ್, ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಪರಮಾಣು ನಿಕ್ಷೇಪಗಳು, **ಮುಖ್ಯ ಬೆಳೆಗಳು:** ಧಾನ್ಯಗಳು, ಸಣ್ಣ ಕಾಳುಗಳು, ಎಣ್ಣೆ ಬೀಜಗಳು, ತೋಟದ ಬೆಳೆಗಳು, ವಾಣಿಜ್ಯ ಬೆಳೆಗಳ ಹಂಚಿಕೆ ಮತ್ತು ಉತ್ಪಾದನೆ, ಭಾರತೀಯ **ಜನಸಂಖ್ಯಾಶಾಸ್ತ್ರ** – ಬೆಳವಣಿಗೆ, ರಚನೆ, ಹಂಚಿಕೆ, ಸಾಂದ್ರತೆ, ಮಾನವ ಅಭಿವೃದ್ಧಿ ಸೂಚ್ಯಂಕ ಜನಸಂಖ್ಯಾ ಶಾಸ್ತ್ರದ ದತ್ತಾಂಶ.
4. **ಕೈಗಾರಿಕಾ ಸಂಯೋಜನೆ ಮತ್ತು ಅಭಿವೃದ್ಧಿ:** ಭಾರೀ, ಮಧ್ಯಮ, ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳ ಬೆಳವಣಿಗೆ ಮತ್ತು ಹಂಚಿಕೆ – ಭಾರತದ ಕೈಗಾರಿಕಾ ಪ್ರದೇಶಗಳು. ಕೈಗಾರಿಕಾ ಮೂಲ ಸೌಕರ್ಯ – ರೈಲ್ವೆಗಳು, ರಸ್ತೆಗಳು ಮತ್ತು ಬಂದರುಗಳು. ಹಿಂದುಳಿದ ಪ್ರದೇಶಗಳು ಮತ್ತು ಗ್ರಾಮೀಣ ಕೈಗಾರೀಕೀಕರಣ. ಪ್ರಾದೇಶಿಕ ಯೋಜನೆ ಮತ್ತು ಅಭಿವೃದ್ಧಿ ಬುಡಕಟ್ಟು ಮತ್ತು ಗುಡ್ಡಗಾಡು ಪ್ರದೇಶಗಳ, ಬರಪೀಡಿತ ಪ್ರದೇಶಗಳು, ಅಚ್ಚುಕಟ್ಟು ಪ್ರದೇಶಗಳು ಮತ್ತು ಜಲಾನಯನ ಪ್ರದೇಶಗಳು, ಪಟ್ಟಣಗಳು ಮತ್ತು ನಗರಗಳ ವರ್ಗೀಕರಣ, ನಗರ ವಿನ್ಯಾಸ.

5. **ಭೌಗೋಳಿಕ ವಿಭಾಗಗಳು** – ಹವಾಮಾನ, ನದಿಗಳು, ಮಳೆ ಹಂಚಿಕೆ, ನೈಸರ್ಗಿಕ ಸಸ್ಯವರ್ಗ ಮತ್ತು ಮಣ್ಣು, ಕೃಷಿ ಮತ್ತು ಕೃಷಿ ಹವಾಮಾನ ಪ್ರದೇಶಗಳು, ಮುಖ್ಯ ಬೆಳೆಗಳು, ಕರ್ನಾಟಕದ ತೋಟ ಮತ್ತು ವಾಣಿಜ್ಯ ಬೆಳೆಗಳು, ಕರ್ನಾಟಕದ ಖನಿಜ ಸಂಪನ್ಮೂಲಗಳು, ವಿದ್ಯುತ್ ಮೂಲಗಳು (ಜಲ, ಸೌರ, ಪರಮಾಣು ಮತ್ತು ಗಾಳಿ) ಭಾರಿ, ಮಧ್ಯಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು, ಆಗ್ರೋ ಆಧಾರಿತ ಕೈಗಾರಿಕೆಗಳು,ಕರ್ನಾಟಕದ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಗಳು, ಭೌಗೋಳಿಕ ಮಾಹಿತಿ ವ್ಯವಸ್ಥೆ.
6. **ನಗರ ಭೂಬಳಕೆ ನೀತಿ ಮತ್ತು ನಗರೀಕರಣ:** ಜನಸಂಖ್ಯಾ ವೈಶಿಷ್ಟ್ಯತೆಗಳು, ಸಾಕ್ಷರತೆ ಮತ್ತು ನಗರೀಕರಣ, ಜನಸಂಖ್ಯಾ ಸಮಸ್ಯೆಗಳು ಮತ್ತು ನೀತಿಗಳು, ಸಾಕ್ಷರತೆ, ನಗರ ವರ್ಗೀಕರಣ ಮತ್ತು ನಗರ ಕ್ಷೇತ್ರಗಳ ಪ್ರಭಾವ, ಗ್ರಾಮೀಣ ನಗರ ಅಂಚಿನಲ್ಲಿರುವ ನಗರ ಬೆಳವಣಿಗೆಯ ಸಮಸ್ಯೆಗಳು, ಭೂಬಳಕೆ,. ನಗರಯೋಜನೆ, ಕೊಳಚೆ ಮತ್ತು ನಗರ ವಸತಿ, ಆಂತರಿಕ ಮತ್ತು ಪ್ರಾದೇಶಿಕ ವ್ಯಾಪಾರ ಮತ್ತು ಗ್ರಾಮೀಣ ಮಾರುಕಟ್ಟೆಗಳ ಕೇಂದ್ರಗಳ ಪಾತ್ರ.

ವಿಭಾಗ – II : ಭಾರತದ ಸಂವಿಧಾನ ಅವಲೋಕನ (7 ಘಟಕಗಳು)

1. **ಸಂವಿಧಾನದ ಸ್ವರೂಪ:** ಸಾಂವಿಧಾನಿಕ ಬೆಳವಣಿಗೆಗಳು, ಸಂವಿಧಾನದ ಪ್ರಮುಖ ಲಕ್ಷಣಗಳು: ಪೀಠಿಕೆ, ರಾಜ್ಯ ನೀತಿಯ ನಿರ್ದೇಶಕ ತತ್ವಗಳು, ಭಾರತೀಯ ಒಕ್ಕೂಟ ಇತ್ಯಾದಿ.
2. **ಮೂಲಭೂತ ಹಕ್ಕುಗಳು:** ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ದದ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು, ಸಂವಿಧಾನಾತ್ಮಕ ಪರಿಹಾರದ ಹಕ್ಕು, ಸೂಕ್ತ ನಿರ್ಬಂಧಗಳು – ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ಅವಕಾಶಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯಗಳ ನಿಷೇಧ ಅಧಿನಿಯಮ, ರಾಷ್ಟ್ರೀಯ ಮತ್ತು ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ.
3. **ಕಾನೂನಾತ್ಮಕ ಅಧಿಕಾರಗಳ ಹಂಚಿಕೆ:** ಕೇಂದ್ರ ಮತ್ತು ರಾಜ್ಯ ನಡುವೆ, ಕೇಂದ್ರ ಮತ್ತು ರಾಜ್ಯಗಳ ನಡುವೆ ಆಡಳಿತಾತ್ಮಕ ಮತ್ತು ಆರ್ಥಿಕ ಸಂಬಂಧಗಳು, ಸಂವಿಧಾನಿಕ ಸಂಸ್ಥೆಗಳ ಅಧಿಕಾರಗಳು ಮತ್ತು ಪ್ರಕಾರ್ಯಗಳು. ರಾಜ್ಯಪಾಲರ ಅಧಿಕಾರಗಳು ಮತ್ತು ಪ್ರಕಾರ್ಯಗಳು – ಮಂತ್ರಿ ಪರಷತ್ತು ಮತ್ತು ಸಚಿವ ಸಂಪುಟ, ನ್ಯಾಯಿಕ ಪರಿಹಾರೋಪಾಯಗಳು.
4. **ಏಕಸದನ ಮತ್ತು ದ್ವಿಸದನ:** ವಿಧಾನ ಮಂಡಲ ಪ್ರಕಾರ್ಯಗಳು ಮತ್ತು ಹೊಣೆಗಾರಿಕೆಯ ಬಿಕ್ಕಟ್ಟು, ಪ್ರತ್ಯಾಯೋಜಿತ ಶಾಸನ, ಕಾನೂನಾತ್ಮಕ ಕಾರ್ಯವಿಧಾನ ಮತ್ತು ವಿಧಾನ ಮಂಡಲದ ಸಮಿತಿಗಳು, ಪ್ರತ್ಯಾಯೋಜಿತ ಶಾಸನದ ಮೇಲೆ ಕಾನೂನಾತ್ಮಕ ಮತ್ತು ನ್ಯಾಯಾಂಗದ ನಿಯಂತ್ರಣ, ಆಡಳಿತಾತ್ಮಕ ಕ್ರಮದ ನ್ಯಾಯಿಕ ವಿಮರ್ಶೆ, ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್, ಭಾರತದ ಅಟ್ಟಾರ್ನಿ ಜನರಲ್.
5. **ಸಂವಿಧಾನದ ಪ್ರಮುಖ ತಿದ್ದುಪಡಿಗಳು:** ಮೂಲ ರಚನೆಯ ಸಿದ್ಧಾಂತ, ತುರ್ತು ಪರಿಸ್ಥಿತಿಯ ಅವಕಾಶಗಳು ಮತ್ತು ವಿಕೇಂದ್ರೀಕರಣ, ಪಂಚಾಯತ್ ರಾಜ್, ಎಪ್ಪತ್ತಮೂರನೇ ಮತ್ತು ಎಪ್ಪತ್ತನಾಲ್ಕನೇ ತಿದ್ದುಪಡಿಗಳು ಇತ್ಯಾದಿ.

6. **ಭಾರತದಲ್ಲಿ ಕಲ್ಯಾಣ ಪರಿಕಲ್ಪನೆ ವ್ಯವಸ್ಥೆ:** ರಾಜ್ಯ ನೀತಿಯ ನಿರ್ದೇಶಕ ತತ್ವಗಳು ಮತ್ತು ಅವುಗಳ ಸಂಬಂಧಗಳು, ಆಸ್ತಿ ಹಕ್ಕು, ಚುನಾವಣಾ ಆಯೋಗ, ಲೋಕ ಸೇವಾ ಆಯೋಗಗಳು, ಮಹಿಳಾ ಆಯೋಗ, ರಾಷ್ಟ್ರೀಯ ಮತ್ತು ರಾಜ್ಯ ಅಲ್ಪಸಂಖ್ಯಾತರ ಆಯೋಗ, ಹಿಂದುಳಿದ ವರ್ಗಗಳ ಆಯೋಗ, ಮಾನವ ಹಕ್ಕುಗಳ ಆಯೋಗ, ಹಣಕಾಸು ಆಯೋಗ, ಯೋಜನಾ ಆಯೋಗ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿ.
7. **ಕೇಂದ್ರ ರಾಜ್ಯದಡಿಯಲ್ಲಿನ ಸೇವೆಗಳು:** ಸರ್ಕಾರ ಮತ್ತು ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಸಂವಿಧಾನಾತ್ಮಕ ಅವಕಾಶಗಳು.

ವಿಭಾಗ – III : ಸಾರ್ವಜನಿಕ ಆಡಳಿತ ಮತ್ತು ನಿರ್ವಹಣೆ – ಅಂತರಾಷ್ಟ್ರೀಯ ಸಂಬಂಧಗಳು (7 ಘಟಕಗಳು)

1. **ಖಾಸಗಿ ಮತ್ತು ಸಾರ್ವಜನಿಕ ಆಡಳಿತ:** ಸಮಾಜದಲ್ಲಿ ಅದರ ಪಾತ್ರ, ಕಲೆ ಮತ್ತು ವಿಜ್ಞಾನದಲ್ಲಿ ಸಾರ್ವಜನಿಕ ಆಡಳಿತ, ಹೊಸ ಸಾರ್ವಜನಿಕ ಆಡಳಿತ ಮತ್ತು ಹೊಸ ಸಾರ್ವಜನಿಕ ನಿರ್ವಹಣೆ, ಪ್ರತಿಕ್ರಿಯಾಶೀಲ ಆಡಳಿತ. ಆಡಳಿತ ಮತ್ತು ನಿರ್ವಹಣೆ ನಡುವಿನ ವ್ಯತ್ಯಾಸ, ಸಾರ್ವಜನಿಕ ಮತ್ತು ಖಾಸಗಿ ಆಡಳಿತದ ನಡುವಿನ ವ್ಯತ್ಯಾಸ.
2. **ಸಂಘಟನೆ ರಚನೆ:** ಸಿಬ್ಬಂದಿ, ಹಣಕಾಸು, ಆಡಳಿತಾತ್ಮಕ ಕಾನೂನು, ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆ, ಜನಕಲ್ಯಾಣ ಆಡಳಿತ, ಭಾರತೀಯ ಆಡಳಿತದಲ್ಲಿ ಪ್ರದೇಶಗಳ ವಿವಾದಗಳು, ಅಭಿವೃದ್ಧಿ ಆಡಳಿತ.
3. **ಸಾಂಸ್ಥಿತಿಕ ವರ್ತನೆ ಮತ್ತು ನಿರ್ವಹಣೆ ಪರಿಕಲ್ಪನೆಗಳು:** ಸಾಂಸ್ಥಿಕ ರಚನೆ, ವ್ಯವಸ್ಥೆಗಳು, ಪ್ರಕ್ರಿಯೆಗಳು, ತಂತ್ರ ಕುಶಲತೆ, ಕಾರ್ಯನೀತಿಗಳು ಮತ್ತು ಉದ್ದೇಶಗಳು, ನಿರ್ಧಾರ ತೆಗೆದುಕೊಳ್ಳುವುದು, ಸಂವಹನ, ಕೇಂದ್ರೀಕರಣ, ವಿಕೇಂದ್ರೀಕರಣ, ಅಧಿಕಾರದ ಪ್ರತ್ಯಾಯೋಜನೆ, ಹೊಣೆಗಾರಿಕೆ, ನಿಯಂತ್ರಣ.
4. **ಔಪಚಾರಿಕ ಮತ್ತು ಅನೌಪಚಾರಿಕ ಸಂಘಟನೆ:** ಪ್ರಕಾರ್ಯಗಳ ನಿರ್ವಹಣೆ, ಹಣಕಾಸು, ಎಚ್‌ಆರ್ ವ್ಯಾಪಾರೋದ್ಯಮ, ಉತ್ಪಾದನೆ, ನಾಯಕತ್ವ ಮತ್ತು ಪ್ರೇರಣೆ.
5. **ನಿರ್ವಹಣೆ ಸಾಧನಗಳು ಮತ್ತು ತಂತ್ರಗಳು:** ಅನಿಶ್ಚಿತತೆ ಉಂಟಾದಲ್ಲಿ ತೀರ್ಮಾನ ತೆಗೆದುಕೊಳ್ಳುವುದು ಪಿಇಆರ್‌ಟಿ ಮತ್ತು ಸಿಪಿಎಂ, ಪಿಐಎಂಇ, ಪಿಓಎಸ್‌ಡಿ – ಸಿಓಆರ್‌ಬಿ, ಎಸ್‌ಡಬ್ಲ್ಯೂಒಟಿ ವಿಶ್ಲೇಷಣೆಗಳು, ಗುಣಮಟ್ಟ ಮತ್ತು ಮೌಲ್ಯನಿರ್ಣಯ ಕಾರ್ಯನಿರ್ವಹಣೆ, ಪಿಡಿಸಿಎ ಆವರ್ತ, ಸಿಬ್ಬಂದಿ ಕಾರ್ಯನೀತಿಗಳು, ಮಾನವ ಶಕ್ತಿ – ಕಾರ್ಯನೀತಿ ಮತ್ತು ಯೋಜನೆ, ತರಬೇತಿ ಮತ್ತು ಅಭಿವೃದ್ಧಿ, ಸಂಘರ್ಷ ನಿರ್ವಹಣೆ, ಬದಲಾವಣೆ ಮತ್ತು ಅಭಿವೃದ್ಧಿಯ ನಿರ್ವಹಣೆ, ತಂಡ ರಚನೆ ಗುಣಮಟ್ಟದ ಉಪಕರಣಗಳು, (ಹೊಸ ಕಲ್ಪನೆಗಳನ್ನು ಚರ್ಚಿಸುವ ವಿಧಾನ, ನಾಮಿನಲ್ ಗ್ರೂಪ್ ಟೆಕನಿಕ್), (Nominal Group Technique) ಪೆರೆಟೋ ಚಾರ್ಟ್, ಫಿಷಬೋನ್ ಚಿತ್ರ (Fishbone Diagram) ಮತ್ತು ಪ್ರೊಸಸ್ ಚಾರ್ಟ್.
6. **ಆಡಳಿತಾತ್ಮಕ ಸುಧಾರಣೆಗಳು:** ಸಾರ್ವಜನಿಕ ಸೇವೆಯಲ್ಲಿ ನೀತಿ ಮತ್ತು ಮೌಲ್ಯಗಳು, ಸಾರ್ವಜನಿಕ ಸಂಬಂಧಗಳು, ಉತ್ತಮ ಆಡಳಿತ, ಹೊಣೆಗಾರಿಕೆ ಮತ್ತು ನಿಯಂತ್ರಣ, ಕಾರ್ಯಕ್ರಮದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ, ಲೋಕಪಾಲ ಮತ್ತು ಲೋಕಾಯುಕ್ತ. ನಾಗರಿಕ ಕುಂದು ಕೊರತೆಗಳ ನಿವಾರಣೆಗಳು, ಜಿಲ್ಲಾಡಳಿತ ಮತ್ತು ಪಂಚಾಯತ್ ರಾಜ್ ವ್ಯವಸ್ಥೆ, ಕಾನೂನು ಮತ್ತು ಸುವ್ಯವಸ್ಥೆ ಮತ್ತು ಅಭಿವೃದ್ಧಿ ಕಾರ್ಯಗಳು, ಅಭಿವೃದ್ಧಿ ಕಾರ್ಯಕ್ರಮಗಳು, ಪರಿಶಿಷ್ಟ ಜಾತಿ ಮತ್ತು

ಪರಿಶಿಷ್ಟ ಪಂಗಡಗಳು ಹಾಗೂ ಮಹಿಳೆಯ ಕಲ್ಯಾಣ ಕಾರ್ಯಕ್ರಮಗಳು, ಜನರ ಪಾಲ್ಗೊಳ್ಳುವಿಕೆ, ಆಡಳಿತಾತ್ಮಕ ಸುಧಾರಣೆಗಳ ಆಯೋಗಗಳು – ಕೇಂದ್ರ ಮತ್ತು ರಾಜ್ಯ.

7. **ವಿಶ್ವಸಂಸ್ಥೆ ರಾಷ್ಟ್ರಗಳು ಮತ್ತು ವಿಶಿಷ್ಟ ಏಜೆನ್ಸಿಗಳು:** ಇತರ ಅಂತರಾಷ್ಟ್ರೀಯ ಸಂಘಟನೆಗಳು ಮತ್ತು ಏಜೆನ್ಸಿಗಳು, ಯುಎನ್ಓದ ಮೂಲ ಮತ್ತು ಅಭಿವೃದ್ಧಿ – ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಪಾತ್ರ, ಸಾಮಾನ್ಯ ಸಭೆ, ಭದ್ರತಾ ಮಂಡಳಿ, ಆರ್ಥಿಕ ಮತ್ತು ಸಾಮಾಜಿಕ ಮಂಡಳಿ, ಟ್ರಸ್ಟಿಶಿಪ್ ಕೌನ್ಸಿಲ್, ಅಂತಾರಾಷ್ಟ್ರೀಯ ನ್ಯಾಯಾಲಯ, ಯುಎನ್ ಮತ್ತು ಶಾಂತಿ ಪಾಲನಾ ನಿರ್ವಹಣೆಗಳು, ಯುಎನ್ ಮತ್ತು ನಿಶ್ಯಸ್ತ್ರೀಕರಣ, ಯುಎನ್ ಲಕ್ಷಣಗಳು, ಡಬ್ಲ್ಯೂಎಚ್ಓ, ಐಎಲ್ಓ, ಎಫ್ಎಒ, ಇತ್ಯಾದಿಗಳಂಥ ವಿಶೇಷ ಏಜೆನ್ಸಿಗಳು, ಐಎಮ್ಎಫ್‌ನಂತ ಅಂತರಾಷ್ಟ್ರೀಯ ಸಂಸ್ಥೆಗಳು, ವಿಶ್ವಬ್ಯಾಂಕ್, ಎಡಿಬಿ, ಡಬ್ಲ್ಯೂಟಿಒ, ಇಯು, ಎಎಸ್ಇಎಎನ್, ಸಾರ್ಕ್, ಎಯು, ಎನ್ಎಟಿಒ, ಎನ್ಎಎಮ್, ಓಪಿಇಸಿ, ಜಿ–8, ಐಎಇಎ ಇತ್ಯಾದಿಗಳು, ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಅಭಿವೃದ್ಧಿ ರಾಷ್ಟ್ರಗಳ ಪಾತ್ರ, ಭಾರತ ಮತ್ತು ಅದರ ನೆರೆಹೊರೆ ರಾಷ್ಟ್ರಗಳು ಇತ್ಯಾದಿ.

ಪತ್ರಿಕೆ –4: ಸಾಮಾನ್ಯ ಅಧ್ಯಯನ – 3

ವಿಭಾಗ–I: ಭಾರತದ ಅಭಿವೃದ್ಧಿಯಲ್ಲಿ ಸಾರ್ವಜನಿಕ ಕ್ಷೇತ್ರದ ವಿಜ್ಞಾನ ಮತ್ತು ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನದ ಪಾತ್ರ ಮತ್ತು ಪ್ರಭಾವ

1. **ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಗಳು:**
   ವಿಜ್ಞಾನ ಮತ್ತು ತಂತ್ರಜ್ಞಾನದ (ಎಸ್&ಟಿ)ದ ಉತ್ಕೃಷ್ಟ ಮತ್ತು ಹೊರಹೊಮ್ಮುತ್ತಿರುವ ಕ್ಷೇತ್ರಗಳು, ವಿಜ್ಞಾನ ಮತ್ತು ತಂತ್ರಜ್ಞಾನದ ಹೆಚ್ಚುವರಿ ಮೌಲ್ಯ, ಭಾರತದಲ್ಲಿ ಪ್ರಸಕ್ತ ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಗಳು ಮತ್ತು ರಾಷ್ಟ್ರೀಯ ಅಭಿವೃದ್ಧಿಗೆ ಯಂತ್ರವಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವ – ಕೈಗಾರಿಕಾ ಅಭಿವೃದ್ಧಿ ಮತ್ತು ನಗರೀಕರಣ – ವಿಜ್ಞಾನ ಮತ್ತು ತಂತ್ರಜ್ಞಾನದ ರಾಷ್ಟ್ರೀಯನೀತಿ: ಕಾಲಕಾಲಕ್ಕೆ ನೀತಿಯಲ್ಲಿ ಬದಲಾವಣೆ: ತಂತ್ರಜ್ಞಾನದ ಮಂಡಳಿ – ಐಸಿಟಿ: ಮೂಲ ಕಂಪ್ಯೂಟರ್‌ಗಳು, ಸಂವಹನ, ದೂರವಾಣಿ ಮತ್ತು ದೂರದರ್ಶನ – ಬ್ರಾಡ್‌ಬ್ಯಾಂಡ್, ಅಂತರ್ಜಾಲ ಮತ್ತು ವೆಬ್ – ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳು, ವ್ಯಾಪಾರ ಹೊರಗುತ್ತಿಗೆ ಪ್ರಕ್ರಿಯೆ (ಬಿಪಿಒ), ಆರ್ಥಿಕ ಮತ್ತು ಉದ್ಯೋಗದ ಬೆಳವಣಿಗೆ ಇ–ಆಡಳಿತ, ಇ–ವಾಣಿಜ್ಯ ಮತ್ತು ಇ–ಕಲಿಕೆ, ಮಾಹಿತಿ ತಂತ್ರಜ್ಞಾನ ಮತ್ತು ಗ್ರಾಮೀಣ ಅನ್ವಯಗಳು, ಅಂಕೀಯ ಬಿರುಕಿನ ಅಂತರ (ಡಿಜಿಟಲ್ ಡಿವೈಡ್) ಮತ್ತು ಅದರ ತಡೆಗಟ್ಟುವಿಕೆ – ಸಮೂಹ ಮಾಧ್ಯಮಗಳಲ್ಲಿ ಗಣಕಯಂತ್ರಗಳು.

2. **ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ:**
   - ಜಾಗತಿಕ ಬಾಹ್ಯಾಕಾಶದ ಕಾರ್ಯಕ್ರಮಗಳ ಸಂಕ್ಷಿಪ್ತ ಇತಿಹಾಸ, ಮತ್ತು ಪ್ರಸಕ್ತ ಬಾಹ್ಯಾಕಾಶ ಕಾರ್ಯಕ್ರಮಗಳು
   - ಭಾರತದಲ್ಲಿ ಬಾಹ್ಯಾಕಾಶದ ಕಾರ್ಯಕ್ರಮಗಳು – ಐಎನ್ಎಸ್ಎಟಿ, (ಇನ್ಸ್ಯಾಟ್) ಐಆರ್ಎಸ್ ವ್ಯವಸ್ಥೆಗಳು, ಇಡಿಯುಎಸ್ಎಟಿ, (ಎಜುಸ್ಯಾಟ್) ಮತ್ತು ಚಂದ್ರಯಾನ – 1 ಇತ್ಯಾದಿ ಮತ್ತು ಭವಿಷ್ಯದ ಕಾರ್ಯಕ್ರಮ.

- ಶಿಕ್ಷಣ, ಕೃಷಿ ಮತ್ತು ಇತರ ಗ್ರಾಮೀಣಾಭಿವೃದ್ಧಿ ಚಟುವಟಿಕೆಗಳ ವಿಶೇಷ ಉಲ್ಲೇಖನಗಳೊಂದಿಗೆ ಅನ್ವಯಿಸಿ ಭಾರತದಲ್ಲಿ ಬಾಹ್ಯಾಕಾಶ ತಂತ್ರಜ್ಞಾನ.

3. ಇಂಧನ ಸಂಪನ್ಮೂಲಗಳು:

- ಭಾರತೀಯ ಇಂಧನ ಸನ್ನಿವೇಶಗಳು – ಜಲವಿದ್ಯುತ್, ಉಷ್ಣ, ಅಣು ಮತ್ತು ನವೀಕರಿಸಬಹುದಾದ; ಅದರ ಸಾಮರ್ಥ್ಯದ ರಕ್ಷಾಕವಚ ಮತ್ತು ಆಯ್ಕೆಗಳು.
- ನವೀಕರಿಸಬಹುದಾದ ಮುಖ್ಯವಾದ ಇಂಧನ ಸಂಪನ್ಮೂಲಗಳು – ಸೌರ, ಗಾಳಿ, ಸಣ್ಣ/ಅತಿಸಣ್ಣ/ಸೂಕ್ಷ್ಮ, ಹೈಡ್ರೋಜನ್ ಮತ್ತು ಇಂಧನ ಕೋಶಗಳು.
- ಶಾಸನಗಳನ್ನು ಸಮರ್ಥಗೊಳಿಸುವುದು: ಆರ್ಥಿಕ ಮತ್ತು ಪ್ರಕ್ರಿಯಾ ಪ್ರೋತ್ಸಾಹ ಧನಗಳು ಮತ್ತು ಹೂಡಿಕೆದಾರರಿಗೆ ವ್ಯಾಪಾರ ಅವಕಾಶಗಳು.

4. ವಿಕೋಪಗಳು, ಉಪದ್ರವಕಾರಿಗಳು ಮತ್ತು ಮಾಲಿನ್ಯ:

- ಹವಾಮಾನ ಬದಲಾವಣೆ – ಪ್ರವಾಹ, ಚಂಡಮಾರುತ, ಸುನಾಮಿ, ನೈಸರ್ಗಿಕ ಹಾಗೂ ಮಾನವನಿಂದಾಗುವ ವಿಕೋಪಗಳು ಮತ್ತು ವಿಪತ್ತು ನಿರ್ವಹಣೆ.
- ಭಾರತದಲ್ಲಿ ಬೆಳೆ ವಿಜ್ಞಾನ ಗೊಬ್ಬರಗಳು, ಉಪದ್ರವಕಾರಿಗಳು ಮತ್ತು ಬೆಳೆರೋಗಗಳ ನಿಯಂತ್ರಣ
  ಶುದ್ಧ ಕುಡಿಯುವ ನೀರು ಮತ್ತು ಸರಬರಾಜು
  ನೈರ್ಮಲ್ಯ ಮತ್ತು ತ್ಯಾಜ್ಯ ವಿಲೇವಾರಿ
  ನಗರೀಕರಣ: ಕೈಗಾರಿಕೀಕರಣ ಮತ್ತು ಮಾಲಿನ್ಯ ನಿಯಂತ್ರಣ

5. ಸಂಬಂಧಿಸಿದ ಸಂವೇದನೆಗಳು:

- ಸರ್ವವ್ಯಾಪ್ತಿ ವಿಜ್ಞಾನ ಮತ್ತು ತಂತ್ರಜ್ಞಾನ ಸಾಕ್ಷರತೆ
- ಮಾನವೀಯ ಮೌಲ್ಯದೊಂದಿಗೆ ತಂತ್ರಜ್ಞಾನ
- ಮಾನವ ಅಭಿವೃದ್ಧಿ ಸೂಚ್ಯಂಕ (ಎಚ್‌ಡಿಐ)
- ಜಿಡಿಪಿಯ ಬೆಳವಣಿಗೆ ಮತ್ತು ಕೊಡುಗೆ
- ಜಾಗತಿಕ ಸ್ಪರ್ಧೆಯನ್ನು ಎದಿರಿಸುವುದು
- ಸಂಸ್ಕೃತಿ ಮತ್ತು ದೇಶೀಯ ಜ್ಞಾನವನ್ನು ಸಂರಕ್ಷಣೆ ಮತ್ತು ಉನ್ನತಿಕರಿಸುವ ಸಂಬಂಧ

6. ಜ್ಞಾನ ಸಮಾಜದ

- ಮಾನವ ಬಂಡವಾಳ, ಅದರ ಶಕ್ತಿ, ಶಿಕ್ಷಣ ನೀಡುವುದು, ಕೌಶಲ್ಯ ಮತ್ತು ಮೌಲ್ಯಗಳು
- ಆರ್ಥಿಕ ಬೆಳವಣಿಗೆ. ಸಾಮಾಜಿಕ ಅಭಿವೃದ್ಧಿ, ಸಾಂಸ್ಕೃತಿಕ ಏಳಿಗೆ ಮತ್ತು ರಾಜಕೀಯ ಸಬಲೀಕರಣದಲ್ಲಿ ಜ್ಞಾನದ ಪಾತ್ರ,
- ಜ್ಞಾನದ ಮೂಲಕ ಗುರಿಗಳ ಸಾಧನೆ, ಬಡತನದ ನಿರ್ಮೂಲನೆ, ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ, ಲಿಂಗ ಸಮಾನತೆ.

7. ಗ್ರಾಮೀಣ ಉನ್ನತೀಕರಣ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ

- ಗ್ರಾಮೀಣ ಪ್ರದೇಶಗಳಲ್ಲಿ ಆಧುನಿಕ ಮೂಲಸೌಕರ್ಯಗಳು, ಭೌತಿಕ ವಿಭಾಗ, ವಿದ್ಯುನ್ಮಾನ, ಜ್ಞಾನ ಮತ್ತು ಆರ್ಥಿಕ ಸಂಪರ್ಕವನ್ನು ಸ್ಥಾಪಿಸುವುದು
- ಪ್ರಾದೇಶಿಕ ಭಾಷೆ: ಐಸಿಟಿಯಲ್ಲಿ ಬಳಕೆ

- ತೋಟಗಾರಿಕೆ: ಸಂಶೋಧನೆ ಮತ್ತು ಅಭಿವೃದ್ಧಿಯೊಂದಿಗೆ ಹೈಬ್ರೀಡ್ ಬೀಜ ಉತ್ಪಾದನೆ: ಹಣ್ಣು ಮತ್ತು ತರಕಾರಿ ಸಂಸ್ಕರಣೆ ಘಟಕಗಳನ್ನು ಸ್ಥಾಪಿಸುವುದು, ಪ್ಯಾಕೇಜಿಂಗ್ ಮತ್ತು ಮಾರಾಟ ಮಾಡುವಿಕೆ.
- ಕೃಷಿ ಆಹಾರ ಸಂಸ್ಕರಣೆ: ಗ್ರಾಮದ ಸಮೂಹಗಳನ್ನು ರೂಪಿಸುವಿಕೆ ಮತ್ತು ಆಹಾರ ಸಂಗ್ರಹ ಸ್ಥಾಪಿಸುವುದು ಮತ್ತು ಆಹಾರ ಪ್ಯಾಕ್ ಮಾಡುವುದು ಮತ್ತು ಮಾರಾಟ.
- ಜೈವಿಕ ಇಂಧನ ಸಾಗುವಳಿ ಮತ್ತು ತೆಗೆಯುವಿಕೆ
- ವೈಜ್ಞಾನಿಕ ನೀರು ಸಂಗ್ರಹಣೆ

ವಿಭಾಗ–II: ಸ್ವಾಭಾವಿಕ ವಿಜ್ಞಾನ, ಜೀವ ವಿಜ್ಞಾನ, ಕೃಷಿ ವಿಜ್ಞಾನದ ಆರೋಗ್ಯ ಮತ್ತು ಶುಚಿತ್ವದಲ್ಲಿ ಮುಂದುವರೆದ ಮತ್ತು ಆಧುನಿಕ ಧೋರಣೆಗಳು – (ಏಳು ಘಟಕಗಳು)

1. ಸ್ವಾಭಾವಿಕ ವಿಜ್ಞಾನ:

ಸಸ್ಯಗಳು – ಬೆಳೆಗಳ ಸಸ್ಯಗಳು, ಅರಣ್ಯ ರೂಪಗಳು, ವೈದ್ಯಕೀಯ ಮತ್ತು ಸುಗಂಧದ ಸಸ್ಯಗಳು, ಸಸ್ಯಗಳ ಉಪಯುಕ್ತತೆ ಮತ್ತು ಮಾನವ ವ್ಯವಹಾರಗಳು (ಉಪಯುಕ್ತತೆ), ದ್ಯುತಿ ಸಂಶ್ಲೇಷಣೆ, ಉತ್ಸರ್ಜನ, ಹಾನಿಕಾರಕ ಸಸ್ಯಗಳು.

- ಪ್ರಾಣಿಗಳ ಸಾಮಾನ್ಯ ವರ್ಗೀಕರಣ – ಸಾಕು ಪ್ರಾಣಿಗಳು ಮತ್ತು ವನ್ಯ ಮೃಗಗಳು. ಪ್ರಾಣಿಗಳು ಮತ್ತು ಮಾನವ ವ್ಯವಹಾರಗಳ ಉಪಯುಕ್ತತೆಗಳು (ಉಪಯುಕ್ತತೆ)
- ಸೂಕ್ಷ್ಮ ಜೀವಿಗಳು: ಸಾಮಾನ್ಯ ಬ್ಯಾಕ್ಟೀರಿಯಾ, ವೈರಸ್. ಶೀಲೀಂಧ್ರಗಳು, ಮನುಷ್ಯವರ್ಗದ ಮೇಲೆ ಅದರ ಪ್ರಯೋಜನಕಾರಿ ಮತ್ತು ಹಾನಿಕಾರಕ ಪರಿಣಾಮ

2. ಕೃಷಿ ವಿಜ್ಞಾನ:

ರಾಷ್ಟ್ರೀಯ ಮತ್ತು ರಾಜ್ಯದ ಅರ್ಥವ್ಯವಸ್ಥೆಯಲ್ಲಿ ಕೃಷಿ ಸನ್ನಿವೇಶ ಮತ್ತು ಕೃಷಿಯ ಪ್ರಾಮುಖ್ಯತೆ, ಬೆಳೆ ಉತ್ಪಾದನೆ ಮತ್ತು ಸಂರಕ್ಷಣೆ. ರಾಸಾಯನಿಕ ಗೊಬ್ಬರ ಮತ್ತು ಸಾವಯವ ಗೊಬ್ಬರ (ವರ್ಮಿ ಕಾಂಪೋಸ್ಟ್). ಕೃಷಿ ಉದ್ಯಮಗಳ ವೆಚ್ಚ ಲಾಭ ಮತ್ತು ಹೂಡಿಕೆ ವಿಶ್ಲೇಷಣೆ, ಉತ್ಪಾದನೆ ಮತ್ತು ಉತ್ಪಾದಕತೆ ವರ್ಧನೆ ಕಾರ್ಯಕ್ರಮಗಳು – ಹಸಿರು, ಬಿಳಿ, ಹಳದಿ, ನೀಲಿ ಕ್ರಾಂತಿಗಳು. ಸಾವಯವ ಕೃಷಿ ಮತ್ತು ಕೃಷಿ ಯಂತ್ರಗಳ ಇತ್ತೀಚಿನ ಪ್ರವೃತ್ತಿಗಳು, ಕೃಷಿ ವ್ಯವಸ್ಥೆ ಮತ್ತು ಅದಕ್ಕೆ ಆಧಾರವಾಗಿರುವುದು, ಕೃಷಿ ಸಂಸ್ಕರಣೆ ಮತ್ತು ಕೃಷಿಯಾಧಾರಿತ ಕೈಗಾರಿಕೆಗಳು, ಸುಗ್ಗಿಯ ನಂತರದ ತಂತ್ರಜ್ಞಾನ ಮತ್ತು ಮೌಲ್ಯವರ್ಧನೆ, ಭೂಮಿ ಮತ್ತು ಜಲ ಸಂಪನ್ಮೂಲಗಳ ನಿರ್ವಹಣೆ.

3. ತೋಟಗಾರಿಕೆ ಮತ್ತು ರೇಷ್ಮೆ ಕೃಷಿ:

ತೋಟಗಾರಿಕೆ ಪ್ರಾಮುಖ್ಯತೆ – ತೋಟಗಾರಿಕೆ – ಹೂವಿನ ಕೃಷಿ, ತರಕಾರಿಗಳು, ಹಣ್ಣುಗಳು, ತೋಟದ ಬೆಳೆಗಳು, ಮಸಾಲೆಗಳು, ಸುಗಂಧದ ಮತ್ತು ಔಷಧೀಯ ಸಸ್ಯಗಳ ಪ್ರಾಮುಖ್ಯತೆ. ಹೈಟೆಕ್ ತೋಟಗಾರಿಕೆ (ಹಸಿರು/ಪಾಲಿಮನೆ ಸಾಗುವಳಿ). ಸುಗ್ಗಿಯ ನಂತರ ನಿರ್ವಹಣೆ ಮತ್ತು ಮೌಲ್ಯವರ್ಧನೆ, ತೋಟಗಾರಿಕೆ ಅಭಿವೃದ್ಧಿಗೆ ವಿಶೇಷ ಸಂವರ್ಧನೆ ಕಾರ್ಯಕ್ರಮಗಳು.

ರೇಷ್ಮೆ ಕೃಷಿ: ಭಾರತ ಮತ್ತು ಕರ್ನಾಟಕದಲ್ಲಿ ರೇಷ್ಮೆ ಕೃಷಿಯ ಪ್ರಾಮುಖ್ಯತೆ, ಉಪ್ಪು ನೇರಳೆ (ಹಿಪ್ಪುನೇರಳೆ) ಮತ್ತು ಉಪ್ಪು ನೇರಳೆಯಲ್ಲದ ರೇಷ್ಮೆ ಕೃಷಿ ಹಂಚಿಕೆ. (ಪ್ರದೇಶ, ಉತ್ಪಾದನೆ ಮತ್ತು ರಾಜ್ಯಾದ್ಯಂತ ಉತ್ಪಾದಕತೆ) ರೇಷ್ಮೆಗೂಡು ಉತ್ಪಾದನೆ.

4. ಜೈವಿಕ ತಂತ್ರಜ್ಞಾನದಲ್ಲಿ ಪ್ರಾರಂಭಗಳು:

ಜೈವಿಕ ತಂತ್ರಜ್ಞಾನದ ಪರಿಕಲ್ಪನೆ, ತಳಿಯ ಎಂಜಿನಿಯರಿಂಗ್ ಮತ್ತು ಕಾಂಡಕೋಶಗಳ ಸಂಶೋಧನ ಪರಿಚಯ ಮತ್ತು ವಿನಿಯೋಗ. ದ್ರವ್ಯ ತಳಿ ಮತ್ತು ಆಯ್ಕೆಗೆ ನೆರವಾದ ಮಾರ್ಕರ್, ಟ್ರಾನ್ಸ್‌ಜಿನಿಕ್ ಸಸ್ಯಗಳು (ಕುಲಾಂತರಿ ತಳಿ) ಮತ್ತು ಅದರ ಪ್ರಯೋಜನ, ಪರಿಸರ ಮತ್ತು ಸಮಾಜದ ಮೇಲೆ ಇದರ ಹಾನಿಕಾರಕ ಪರಿಣಾಮಗಳು, ಕೃಷಿಯಲ್ಲಿ ಜೈವಿಕ ತಂತ್ರಜ್ಞಾನ (ಜೈವಿಕ – ಗೊಬ್ಬರ, ಜೈವಿಕ – ಕ್ರಿಮಿನಾಶಕಗಳು, ಜೈವಿಕ – ಇಂಧನಗಳು, ಅಂಗಾಂಶ ಕೃಷಿ, ಕ್ಲೋನಿಂಗ್) ಆಹಾರ ಜೈವಿಕ – ತಂತ್ರಜ್ಞಾನ, ಆಹಾರ ಸುರಕ್ಷತೆ ಮತ್ತು ಸೂಕ್ಷ್ಮಜೀವಿಯ ಮಾನದಂಡಗಳು, ಆಹಾರ ಗುಣಮಟ್ಟದ ಮಾನದಂಡಗಳು, ಆಹಾರದ ಬಗ್ಗೆ ಕಾನೂನುಗಳು ಮತ್ತು ನಿಯಂತ್ರಣಗಳು.

5. **ಪಶುಸಂಗೋಪನೆ (ಪಶು, ವೈದ್ಯಕೀಯ ಹೈನುಗಾರಿಕೆ ಮತ್ತು ಮೀನುಗಾರಿಕೆ ವಿಜ್ಞಾನ)** ರಾಷ್ಟ್ರೀಯ ಮತ್ತು ರಾಜ್ಯದ ಆರ್ಥಿಕತೆಯಲ್ಲಿ ಜಾನುವಾರುಗಳ ಪ್ರಾಮುಖ್ಯತೆ. ದನ, ಎಮ್ಮೆ, ಕುರಿ, ಮೇಕೆ, ಹಂದಿ ಮತ್ತು ಕೋಳಿಗಳ ಪ್ರಮುಖ ವಿದೇಶಿ ಮತ್ತು ಭಾರತೀಯ ತಳಿಗಳು.

ಹಾಲು ಉತ್ಪಾದನೆ ನಿರ್ವಹಣೆ ಮತ್ತು ಕ್ಷೀರಾಭಿವೃದ್ಧಿಮ ಹಾಲು ಸಹಕಾರ ಸಂಘಗಳು ಮತ್ತು ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಅವುಗಳ ಪಾತ್ರ – ಅಮೂಲ್, ಕೆಎಂಎಫ್.

ಪ್ರತ್ಯೇಕ ಆರ್ಥಿಕ ವಲಯ, ಕರಾವಳಿ ಜಲಚರ ಸಂಸ್ಕೃತಿ ಮತ್ತು ಕಡಲ ಸಂಸ್ಕೃತಿ, ಒಳನಾಡ ಜಲಸಂಪನ್ಮೂಲಗಳು, ವಾಣಿಜ್ಯ ಸ್ವರೂಪದಲ್ಲಿ ಮುಖ್ಯವಾಗಿರುವ ಮೀನುಗಳು, ಜವಾಬ್ದಾರಿಯುತ ಮೀನುಗಾರಿಕೆ, ಅಲಂಕಾರಿಕ ಮೀನು ಉತ್ಪಾದನೆ, ಪಶು ಸಂಪತ್ತು ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಗುಣಮಟ್ಟ ನಿಯಂತ್ರಣ.

6. ಕೃಷಿ ಅಭಿವೃದ್ಧಿ ನೀತಿಗಳು, ಕಾರ್ಯಕ್ರಮಗಳು ಮತ್ತು ವ್ಯಾಪಾರ

ರಾಷ್ಟ್ರದ ಮತ್ತು ಕರ್ನಾಟಕ ರಾಜ್ಯದ ಕೃಷಿ ನೀತಿಗಳ ಮುಖ್ಯ ಲಕ್ಷಣಗಳು, ಕೃಷಿ ಬೆಲೆ ನೀತಿ, ರಾಷ್ಟ್ರೀಯ ಬೀಜ ನೀತಿ, ಕೃಷಿ ಸಾಲನೀತಿ, ರಾಷ್ಟ್ರೀಯ ಕೃಷಿ ಸಂಶೋಧನಾ ವ್ಯವಸ್ಥೆ (ಎನ್‌ಎಆರ್‌ಎಸ್) ಭಾರತದಲ್ಲಿ ರೈತರ ಅಭಿವೃದ್ಧಿ ಕಾರ್ಯಕ್ರಮಗಳು, ಕೃಷಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು, ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಕೃಷಿ ವ್ಯಾಪಾರೋದ್ಯಮದ ಅಭಿವೃದ್ಧಿ/ಬಲಪಡಿಸುವುದು ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ಗುಣಮಟ್ಟ, ಬೆಳೆ ವಿಮೆ ಯೋಜನೆ – ರಾಷ್ಟ್ರೀಯ ಕೃಷಿ ವಿಮಾಯೋಜನೆ (ಎನ್‌ಎಐಎಸ್), ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (ಡಬ್ಲೂಬಿಸಿಐಎಸ್), ಆಹಾರ ಭದ್ರತೆ, ರಾಷ್ಟ್ರೀಯ ಜಲಾಯನ ಅಭಿವೃದ್ಧಿ ಕಾರ್ಯಕ್ರಮ, ಕೃಷಿ ರಫ್ತು ಸಾಮರ್ಥ್ಯ–ತೋಟಗಾರಿಕೆ–ಜಾನುವಾರು ಉತ್ಪನ್ನಗಳು, ಕೃಷಿಯ ವಾಣಿಜ್ಯೀಕರಣ ಮತ್ತು ಜಾಗತೀಕರಣ – ಡಬ್ಲೂಟಿಓ, ಎಒಎ (ಕೃಷಿ ಒಪ್ಪಂದ).

7. ಆರೋಗ್ಯ ಮತ್ತು ನೈರ್ಮಲ್ಯ:

ಮಾನವ – ಜೀರ್ಣಕಾರಿ, ರಕ್ತಪರಿಚಲನೆ, ಉಸಿರಾಟ, ವಿಸರ್ಜಕಾಂಗಗಳು ಮತ್ತು ಸಂತಾನೋತ್ಪತ್ತಿಯ ವ್ಯವಸ್ಥೆಗಳು, ಆಲೋಪತಿ, ಭಾರತದ ವೈದ್ಯ ಪದ್ಧತಿ, ಪ್ರಕೃತಿ ಚಿಕಿತ್ಸೆ ಮತ್ತು ಯೋಗ (ಆಯುಷ್), ಎನ್‌ಆರ್‌ಎಚ್‌ಎಂ, ರಾಷ್ಟ್ರೀಯ ಎಚ್‌ಐವಿ ಕಾರ್ಯಕ್ರಮ, ಕ್ಷಯ ರೋಗ ಕಾರ್ಯಕ್ರಮ, ಪಿ ಮತ್ತು ಎಸ್‌ಎಂ (ನಿವಾರಣೆ ಮತ್ತು ಸಾಮಾಜಿಕ ಔಷಧ) ರೋಗಗಳು – ಸೋಂಕು ರೋಗಗಳು, ಸಾಂಕ್ರಾಮಿಕ ರೋಗಗಳು, ಸ್ಥಳೀಯ ರೋಗಗಳು, ಅಂಟು ರೋಗಿದಂದ ಉಂಟಾಗುವ ರೋಗಗಳು, ಸೂಕ್ಷ್ಮ ಜೀವಿಗಳ ವಿವಿಧ ಗುಂಪುಗಳಿಂದ ಉಂಟಾದ ಸೋಂಕುಗಳ ಬಗ್ಗೆ ಸಾಮಾನ್ಯ ಜ್ಞಾನ – ಜಠರ, ಕಾಲರ, ಕ್ಷಯ, ಮಲೇರಿಯಾ, ವೈರಸ್ ಸೋಂಕುಗಳು, ಎಚ್‌ಐವಿ, ಮಿದುಳಿನ ಉರಿಯೂತ (ಮೆದಳು ಜ್ವರ), ಚಿಕನ್‌ಗುನ್ಯಾ, ಹಕ್ಕಿಜ್ವರ, ಡೆಂಗ್ಯೂ, ಗಲಭೆ ಸಮಯದಲ್ಲಿ

ಪ್ರತಿಬಂಧಕ ಕ್ರಮಗಳು, ಲಸಿಕೆಗಳು, ರಕ್ಷಣೆಯ ಪ್ರಸ್ತಾವನೆ, ಡಿಪಿಟಿ ಉತ್ಪಾದನೆ ಮತ್ತು ರೇಬೀಸ್ ಲಸಿಕೆಗಳು ಮತ್ತು ಹೆಪಟೈಟಿಸ್ ಲಸಿಕೆ, ರೋಗ ಲಕ್ಷಣ ನಿರ್ಣಯದಲ್ಲಿ ಪ್ರತಿರಕ್ಷೆ ವಿಧಾನ ಅನ್ವಯತೆ. ಆರೋಗ್ಯ ಜಾಗೃತಾ ಕಾರ್ಯಕ್ರಮ ಇತ್ಯಾದಿ.

ವಿಭಾಗ –III: ಪರಿಸರ ಮತ್ತು ಪರಿಸರ ವಿಜ್ಞಾನದಲ್ಲಿ ಅಭಿವೃದ್ಧಿಯ ಸವಾಲುಗಳು ಮತ್ತು ವಿಷಯಗಳು (ಆರು ಘಟಕಗಳು)

1. **ಪರಿಸರದ ಭಾಗಗಳು** – ಅಭಿವೃದ್ಧಿ ಮತ್ತು ರಕ್ಷಣೆ, ಅರಣ್ಯ ಸಂರಕ್ಷಣೆ ಮತ್ತು ಪರಿಸರವಾದ ವನ್ಯಜೀವಿ ಸಂರಕ್ಷಣೆ, ಪ್ರಾಜೆಕ್ಟ್ ಟೈಗರ್ ರಾಷ್ಟ್ರೀಯ ಉದ್ಯಾನಗಳು ಮತ್ತು ಅಭಯಾರಣ್ಯಗಳು, ಅರಣ್ಯ ಮತ್ತು ಪರಿಸರದಲ್ಲಿ ಗಣಿಗಾರಿಕೆ ಪರಿಣಾಮ, ಕೆಂಪು ಅಂಕಿಅಂಶ ಪುಸ್ತಕ: ವಿನಾಶದಂಚಿನಲ್ಲಿರುವ ಸಸ ತಳಿಗಳು, ಪರಿಸರ ಪ್ರವಾಸೋದ್ಯಮ ಮತ್ತು ಯಾವುದೇ ಇತರ ಸಂಬಂಧಪಟ್ಟ ಪ್ರಸ್ತುತ ವಿಷಯಗಳು.
2. **ಸ್ವಾಭಾವಿಕ ಸಂಪನ್ಮೂಲಗಳು:** ಅರಣ್ಯ – ಅರಣ್ಯದ ಬಗೆಗಳು ಮತ್ತು ಅರಣ್ಯ ಸಂರಕ್ಷಣೆ ಮತ್ತು ಅರಣ್ಯ ಸಂಪನ್ಮೂಲಗಳು, ಜಲ ಸಂಪನ್ಮೂಲಗಳು – ಪ್ರವಾಹ ಮತ್ತು ಬರ ಸಂಭವಗಳು, ಜಲ ಸಂಪನ್ಮೂಲಗಳು ನಿರ್ವಹಣೆ, ಭೂ ಸಂಪನ್ಮೂಲಗಳು, ಮಳೆ ನೀರು ಸಂಗ್ರಹ. **ಮೂಲಸೌಕರ್ಯ ಅಭಿವೃದ್ಧಿ – ಅಣೆಕಟ್ಟುಗಳು, ರಸ್ತೆಗಳು, ರೈಲು ಕಂಬಿಗಳು, ಸೇತುವೆಗಳು, ಕೈಗಾರಿಕೆ**, ನಗರೀಕರಣ ಮತ್ತು ತ್ಯಾಜ್ಯ ನೀರಿನ ನಿರ್ವಹಣೆ, ಸ್ವಾಧೀನತೆ ಮತ್ತು ಪುನರ್ವಸತಿ ಮತ್ತು ಮಾನವ ಹಸ್ತಕ್ಷೇಪಗಳ ಕಾರಣವಾದ ಇತರ ವಿಷಯಗಳು ಮತ್ತು ಯಾವುದೇ ಇತರ ಸಂಬಂಧಪಟ್ಟ ಪ್ರಸ್ತುತ ವಿಷಯಗಳು.
3. **ಪರಿಸರ ಪದ್ಧತಿ ಮತ್ತು ಜೀವ ವೈವಿಧ್ಯತೆ** – ಪರಿಸರ ವಿಜ್ಞಾನ – ಪರಿಸರ ವಿಜ್ಞಾನದ ಮೂಲ ಪರಿಕಲ್ಪನೆಗಳು, ಪರಿಸರ ಪದ್ಧತಿ, ಆಹಾರ ಸರಪಳಿ, ಜೀವ ವೈವಿಧ್ಯತೆ ಮತ್ತು ಅದರ ಸಂರಕ್ಷಣೆ, ಜೀವ ವೈವಿಧ್ಯತೆಯ ಅಪಾಯದ ಸ್ಥಳಗಳು, ವೈವಿಧ್ಯತೆಯ ಅಪಾಯಗಳು, ಅರಣ್ಯ ಸಮರ್ಥನೀಯ ಅಭಿವೃದ್ಧಿ ಮತ್ತು ನಿರ್ವಹಣೆ, ಯಾವುದೇ ಇತರ ಸಂಬಂಧಪಟ್ಟ ಪ್ರಸ್ತುತ ವಿಷಯಗಳು, ಐಪಿಆರ್.
4. **ಪರಿಸರ ಮಾಲಿನ್ಯ ಮತ್ತು ಘನ ತ್ಯಾಜ್ಯ ನಿರ್ವಹಣೆ:** ವಾಯುಮಾಲಿನ್ಯ, ಜಲಮಾಲಿನ್ಯ, ಮಣ್ಣಿನ ಮಾಲಿನ್ಯ, ಶಬ್ದಮಾಲಿನ್ಯ ಮತ್ತು ಪರಿಹಾರಗಳು, ಘನತ್ಯಾಜ್ಯ ನಿರ್ವಹಣೆ, ಘನ ತ್ಯಾಜ್ಯ ನಿರ್ವಹಣೆಯ ವಿಧಗಳು, ಘನತ್ಯಾಜ್ಯ ಉತ್ಪಾದನೆ ಮೇಲೆ ಪರಿಣಾಮ ಬೀರುವ ಅಂಶಗಳು, ಘನತ್ಯಾಜ್ಯ ಪರಿಣಾಮ, ಪುನಃಬಳಕೆ ಮತ್ತು ಮರು ಉಪಯೋಗಿಸುವಿಕೆ, ಸಂಬಂಧಪಟ್ಟ ಯಾವುದೇ ಪ್ರಸ್ತುತ ವಿಷಯಗಳು. ಪರಿಸರ ಸಂರಕ್ಷಣೆ ಅಧಿನಿಯಮ, ವಾಯು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ), ಜಲ (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಜಲಮಾಲಿನ್ಯ ತೆರಿಗೆ ಅಧಿನಿಯಮ.
5. **ಪರಿಸರ ಮತ್ತು ಮಾನವ ಆರೋಗ್ಯದಲ್ಲಿ ಮಾಹಿತಿ ತಂತ್ರಜ್ಞಾನದ ಪಾತ್ರ:** ಹವಾಗುಣ, ಬದಲಾವಣೆ, ತೀಕ್ಷ್ಣ ಮಳೆಗಳು, ಜಾಗತಿಕ ತಾಪಮಾನ, ಬರಡು ಭೂಮಿ ಸುಧಾರಣೆ, ಜಲಾಯನ ಪ್ರದೇಶ ನಿರ್ವಹಣೆ, ಸುಸ್ಥಿರ ಸಮರ್ಥನೀಯ ಅಭಿವೃದ್ಧಿಗಾಗಿ ಜಲಾನಯನ ಪ್ರದೇಶದ ಪ್ರಸ್ತಾವನೆ, ನದಿಗಳಿಗೆ, ಸಂಪರ್ಕ ಕಲ್ಪಿಸುವುದು, ನೀರಿನ ಬಿಕ್ಕಟ್ಟು, ಯಾವುದೇ ಇತರ ಸಂಬಂಧಪಟ್ಟ ಪ್ರಸ್ತುತ ವಿಷಯಗಳಂಥ ಜಾಗತಿಕ ಪರಿಸರಾತ್ಮಕ ವಿಷಯಗಳು.
6. **ರಾಜ್ಯ ಸಮುದಾಯ:** ನಾಗರಿಕ ಸಮಾಜದ ಪ್ರಕ್ರಿಯೆಗಳು, ಜಂಟಿ ಅರಣ್ಯ ನಿರ್ವಹಣಾ ವ್ಯವಸ್ಥೆ – ಸಮುದಾಯ ಭಾಗವಹಿಸುವಿಕೆ, ಅಭಿವೃದ್ಧಿ, ಸ್ಥಳಾಂತರ ಮತ್ತು ಪುನರ್ವಸತಿ, ವಿಪತ್ತು ನಿರ್ವಹಣೆ, ಸಮರ್ಥನೀಯ ಅರಣ್ಯ ಅಭಿವೃದ್ಧಿ, ಪ್ರವಾಹ, ಭೂಕಂಪ, ಬರ, ಸುನಾಮಿ, ಜಾಗತಿಕ ತಾಪಮಾನ, ಓಜೋನ್ ಪದರ, ಸಿಎಫ್‌ಸಿ, ಕಾರ್ಬನ್‌ಕ್ರೆಡಿಟ್.

ವಿಭಾಗ – I: ನೀತಿಶಾಸ್ತ್ರ

- ಮಾನವ ಕ್ರಿಯೆಗಳಲ್ಲಿ ನೀತಿಶಾಸ್ತ್ರದ ಸಾರ, ನಿರ್ಣಾಯಕಗಳು ಮತ್ತು ಪರಿಣಾಮಗಳು, ನೀತಿಶಾಸ್ತ್ರದ ಆಯಾಮಗಳು, ಖಾಸಗಿ ಮತ್ತು ಸಾರ್ವಜನಿಕ ಸಂಬಂಧಗಳಲ್ಲಿ ನೀತಿಶಾಸ್ತ್ರ.
- ಸಾರ್ವಜನಿಕ ಆಡಳಿತದಲ್ಲಿ ನೀತಿ ಶಾಸ್ತ್ರ, ಸ್ಥಾನಮಾನ ಮತ್ತು ಸಮಸ್ಯೆಗಳು, ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳಲ್ಲಿ ನೀತಿಯ ಬಿಕ್ಕಟ್ಟುಗಳು, ನೀತಿ ಮಾರ್ಗದರ್ಶನದ ಮೂಲವಾಗಿ ಕಾನೂನುಗಳು, ನಿಯಮಗಳು, ವಿನಿಯಮಗಳು ಮತ್ತು ಧರ್ಮಪ್ರಜ್ಞೆ.
- ಹೊಣೆಗಾರಿಕೆ ಮತ್ತು ನೈತಿಕ ಆಡಳಿತ, ಆಡಳಿತದಲ್ಲಿನ ನೀತಿ ಮತ್ತು ನೈತಿಕ ಮೌಲ್ಯಗಳ ಬಲಪಡಿಸುವಿಕೆ, ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಮತ್ತು ಹಣ ನೀಡಿಕೆಯಲ್ಲಿ ನೀತಿ ವಿಷಯಗಳು, ನಿಗಮಿತ ಆಡಳಿತ.
- ಸಾರ್ವಜನಿಕ ಸೇವೆಯ ಪರಿಕಲ್ಪನೆ, ಆಡಳಿತದ ತಾತ್ವಿಕ ಮೂಲ, ಸರ್ಕಾರದಲ್ಲಿ ಮಾಹಿತಿ ಹಂಚಿಕೆ ಮತ್ತು ಸರ್ಕಾರದ ಪಾರದರ್ಶಕತೆ, ಮಾಹಿತಿ ಹಕ್ಕು, ನೀತಿಶಾಸ್ತ್ರದ ಸಂಹಿತೆಗಳು, ನೀತಿ ಸಂಹಿತೆಗಳು, ನಾಗರೀಕ ಸನ್ನದುಗಳು, ಕೆಲಸದ ಸಂಸ್ಕೃತಿ, ಸೇವೆ ಸಲ್ಲಿಕೆಯ ಗುಣಮಟ್ಟ, ಸಾರ್ವಜನಿಕ ನೀತಿ ಬಳಕೆ, ಭ್ರಷ್ಟಾಚಾರದ ಸವಾಲುಗಳು.
- ಮಾನವ ಮೌಲ್ಯಗಳು – ಮಹಾನ್ ನಾಯಕರು, ಸುಧಾರಕರು, ಆಡಳಿತಗಾರರ ಜೀವನಗಳು ಮತ್ತು ಬೋಧನೆಗಳಿಂದ ಪಾಠಗಳು. ಕುಟುಂಬದ ಪಾತ್ರ, ಸಮಾಜ ಮತ್ತು ಮೌಲ್ಯಗಳನ್ನು ಬೋಧಿಸುವ ಶೈಕ್ಷಣಿಕ ಸಂಸ್ಥೆಗಳು.

ವಿಭಾಗ – II ನೀತಿನಿಷ್ಠೆ

- ನೀತಿನಿಷ್ಠೆ, ನಿಷ್ಪಕ್ಷಪಾತ ಮತ್ತು ಪಕ್ಷಪಾತ ಮಾಡದಿರುವುದು, ಉದ್ದೇಶ, ಸಾರ್ವಜನಿಕ ಸೇವೆಗೆ ಸಮರ್ಪಣೆ, ದುರ್ಬಲ ವರ್ಗಗಳಿಗಾಗಿ ಅನುಭೂತಿ, ತಾಳ್ಮೆ ಮತ್ತು ಅನುಕಂಪ.

ವಿಭಾಗ – III ಅಭಿರುಚಿ

- ನಾಗರಿಕ ಸೇವೆಗಾಗಿ ಅಭಿರುಚಿ ಮತ್ತು ಬುನಾದಿಯ ಮೌಲ್ಯಗಳು, ಒಳಾಂಶ ರಚನೆ, ಪ್ರಕಾರ್ಯ, ಚಿಂತನೆಗಳು ಮತ್ತು ಕಾರ್ಯರೀತಿಯೊಂದಿಗೆ ಅದರ ಸಂಬಂಧ, ನೈತಿಕ ಮತ್ತು ರಾಜಕೀಯ ಮನೋಭಾವಗಳು, ಸಾಮಾಜಿಕ ಪ್ರಭಾವ ಮತ್ತು ಪ್ರೇರಣೆ.
- ನಾಗರೀಕ ಸೇವೆಗಾಗಿ ಅಭಿರುಚಿ ಮತ್ತು ಬುನಾದಿಯ ಮೌಲ್ಯಗಳು, ಭಾವನಾತ್ಮಕ ಬುದ್ಧಿವಂತಿಕೆ ಮತ್ತು ಅದರ ಉಪಯುಕ್ತತೆಗಳು ಹಾಗೂ ಆಡಳಿತ ಮತ್ತು ನಿರ್ವಹಣೆಯ ಅನ್ವಯತೆ, ಭಾರತ ಮತ್ತು ವಿಶ್ವದಿಂದ ನೈತಿಕ ಚಿಂತಕರ ಕೊಡುಗೆಗಳು.